
# ಮಹಾ ದೈವೀಕವಾದ ಕರೆ

## ಅಧ್ಯಯನ # 51



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 51

# ಮಹಾ ದೈವೀಕವಾದ ಕರೆ

ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

**ಈ** ದಿನ ನಾವು ಒಂದು ಕರೆಯನ್ನು ಕುರಿತು ಚರ್ಚಿಸಲಿದ್ದೇವೆ ! ಇದು ಒಂದು ಪ್ರತ್ಯೇಕವಾದ ಜನರ ಗುಂಪಿಗೆ ಪರಲೋಕದಿಂದ ಬರುವ “ಕರೆ” ಯಾಗಿದೆ !!

**ಹೌದು ! ಇದು ಬಹಳ ಮುಖ್ಯವಾದ ಕರೆ!**

ಈಗ ನಾವು ಆ ವಾಕ್ಯವನ್ನು ಓದುವುದರ ಮೂಲಕ ಆ ಕರೆಯುವಿಕೆಯನ್ನು ಕುರಿತು ಕೇಳಿಸಿಕೊಳ್ಳೋಣ –

**ಪ್ರಕಟನೆ 18 : 4**
“ಪರಲೋಕದಿಂದ ಮತ್ತೊಂದು ಶಬ್ಧವನ್ನು ನಾನು ಕೇಳಿದೆನು; ಅದು - ನನ್ನ ಜನರೇ, ಅವಳಿಂದ ಹೊರಗೆ ಬನ್ನಿರಿ; ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಬಾರದು; ಅವಳಿಗಾಗುವ ಉಪದ್ರವಗಳಿಗೆ ಗುರಿಯಾಬಾರದು”

**ಅಗೋ ! ಇದೇ ಆ “ಕರೆ”ಯುವಿಕೆಯಾಗಿದೆ !**

ಇದು “ಪರಲೋಕದಿಂದ ಉಂಟಾದ ಮತ್ತೊಂದು ಶಬ್ಧವಾಗಿದೆ”.

ಇದು ಯಾರ “ಶಬ್ಧ”? ಇದು “ನನ್ನ ಜನರೆ” ಎಂದು ಹೇಳುತ್ತಿದೆ.....

ಈ **"ನನ್ನ ಜನರೆ"** ಎಂದರೆ ಯಾರು ....... ಮತ್ತು **"ಅವಳಿಂದ ಹೊರಗೆ ಬನ್ನಿರಿ"** ಎಂದು ಹೇಳುತ್ತಿದೆ......

ಇದರ ಅರ್ಥವೇನು; ಮತ್ತು **"ಅವಳಿಂದ"** ಎಂದರೆ ಯಾರು?

ಈ "ಕರೆ"ಯುವಿಕೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಮತ್ತು ಈ ಮೇಲಿನ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯಲು ನಾವು

ಪ್ರಕಟನೆ ಪುಸ್ತಕದ 18ನೇ ಅಧ್ಯಾಯದ ಆರಂಭದಲ್ಲಿ ಕೆಲವು ವಾಕ್ಯಗಳನ್ನು ಓದೋಣ

**ಪ್ರಕಟಣೆ 18:1,2**

**"ಇವುಗಳಾದ ಮೇಲೆ ಮಹಾ ಅಧಿಕಾರವುಳ್ಳ ಮತ್ತೊಬ್ಬ ದೂತನು ಪರಲೋಕದಿಂದ ಇಳಿಯುವದನ್ನು ಕಂಡೆನು; ಅವನ ಪ್ರಭಾವದಿಂದ ಭೂಮಿಗೆ ಪ್ರಕಾಶವುಂಟಾಯಿತು, ಅವನು ಗಟ್ಟಿಯಾದ ಶಬ್ಧದಿಂದ ಕೂಗುತ್ತಾ - ಮಹಾಬಾಬೆಲ್ ಬಿದ್ದಳು, ಬಿದ್ದಳು; ದೆವ್ವಗಳ ವಾಸಸ್ಥಾನವೂ ಅಶುದ್ಧಾತ್ಮಗಳ ಆಶ್ರಯವೂ ಅಪವಿತ್ರವಾಗಿಯೂ ಅಸಹ್ಯವಾಗಿಯೂ ಇರುವ ಸಕಲ ವಿಧವಾದ ಪಕ್ಷಿಗಳ ಪಂಜರವೂ ಆದಳು".**

ಪರಲೋಕದಿಂದ ಇಳಿದು ಬರುವ ಮತ್ತು **"ಮಹಾ ಅಧಿಕಾರ"**ವುಳ್ಳ ಈ **"ದೂತನು"** ಯಾರು?

ಆಹ್ ! **"ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವನ್ನು"** ಪಡೆದುಕೊಂಡಿರುವ (ಮತ್ತಾಯ 28:18), ಆತನ ಎರಡನೆಯ ಬರುವಿಕೆಯ ಸಮಯದಲ್ಲಿನ ರಾಜನಾದ ಯೇಸು ಮತ್ತು ಈತನೇ ಆ 2ನೇ ಮತ್ತು 3ನೇ ವಾಕ್ಯಗಳಲ್ಲಿ ಮಾತನಾಡುತ್ತಿರುವುದು.



ನಂತರ ವಾಕ್ಯ-4 ರಲ್ಲಿ ಹೀಗೆ ಓದುತ್ತೇವೆ **"ಪರಲೋಕದಿಂದ ಮತ್ತೊಂದು ಶಬ್ಧವನ್ನು ನಾನು ಕೇಳಿದೆನು; ಅದು - ನನ್ನ ಜನರೇ, ಅವಳಿಂದ ಹೊರಗೆ ಬನ್ನಿರಿ",** ಇದು ಯೇಸುವಿನ ಶಬ್ಧವಲ್ಲ, ಆದರೂ ಅದು ಹೀಗೆ ಹೇಳುತ್ತಿದೆ

**"ನನ್ನ ಜನರೇ"**

ಇದು ಯಾರ **"ಶಬ್ಧ"** ವಾಗಿರಬಹುದು?

## ಇದು ಬೇರೆ ಯಾರೂ ಅಲ್ಲ
## ಸ್ವತ: ಪರಲೋಕದ ತಂದೆ, ಸರ್ವಶಕ್ತನಾದ ಯೆಹೋವ ದೇವರು!

ಇದನ್ನು ಕಲಿತನಂತರ, **"ನನ್ನ ಜನರೇ, ಅವಳಿಂದ ಹೊರಗೆ ಬನ್ನಿರಿ"** ಎಂಬ ಮಾತಿಗೆ ಅರ್ಥವೇನು ಎಂದು ತಿಳಿದುಕೊಳ್ಳಲು ಪ್ರಯತ್ನಿಸೋಣ.

**ಅವಳು ಎಂದರೆ ಯಾರು ಅಥವಾ ಏನು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟಣೆ 18:1-3**

**"ಇವುಗಳಾದ ಮೇಲೆ ಮಹಾ ಅಧಿಕಾರವುಳ್ಳ ಮತ್ತೊಬ್ಬ ದೂತನು ಪರಲೋಕದಿಂದ ಇಳಿಯುವದನ್ನು ಕಂಡೆನು; ಅವನ ಪ್ರಭಾವದಿಂದ ಭೂಮಿಗೆ ಪ್ರಕಾಶವುಂಟಾಯಿತು. ಅವನು ಗಟ್ಟಿ ಯಾದ ಶಬ್ದದಿಂದ ಕೂಗುತ್ತಾ--ಮಹಾಬಾಬೆಲ್ ಬಿದ್ದಳು, ಬಿದ್ದಳು; ದೆವ್ವಗಳ ವಾಸಸ್ಥಾನವೂ ಅಶುದ್ಧಾತ್ಮಗಳ ಆಶ್ರಯವೂ ಅಪವಿತ್ರವಾಗಿಯೂ ಅಸಹ್ಯವಾಗಿಯೂ ಇರುವ ಸಕಲ ವಿಧವಾದ ಪಕ್ಷಿಗಳ ಪಂಜರವೂ ಆದಳು. ಎಲ್ಲಾ ಜನಾಂಗಗಳು ಅವಳ ಜಾರತ್ವವೆಂಬ ಕೋಪದ ದ್ರಾಕ್ಷಾರಸವನ್ನು ಕುಡಿದು ಮತ್ತರಾದರು; ಅವಳೊಂದಿಗೆ ಭೂರಾಜರು ಜಾರತ್ವ ಮಾಡಿದರು; ಅವಳ ಅತಿಶಯವಾದ ವೈಭವದಿಂದ ಭೂಲೋಕದ ವರ್ತಕರು ಐಶ್ವರ್ಯವಂತರಾದರು ಎಂದು ಹೇಳಿದನು."**

ಪ್ರಕಟನೆ ಪುಸ್ತಕದ 18ನೇ ಅಧ್ಯಾಯದ ಮೊದಲ 3 ವಾಕ್ಯದಿಂದ ನಮಗೆ ಮನವರಿಕೆಯಾಗುವದೇನೆಂದರೆ,ಇದು –



**"ಮಹಾ ಬಾಬೆಲ್" ಅನ್ನು (ವಾಕ್ಯ- 2) ಸೂಚಿಸುತ್ತದೆ.**

ನಿಮಗೆ ಈ **"ಮಹಾಬಾಬೆಲ್"** ಯಾರೆಂದು ನೆನಪಿದೆಯೆ?

ಹೌದು! **"ಅವಳನ್ನು"** ಕುರಿತು ನಾವು ವಿವರವಾಗಿ ಅಧ್ಯಯನ # 37 – ಕ್ರಿಸ್ತವಿರೋಧಿ – ಭಾಗ – 3 ರಲ್ಲಿ ನೋಡಿದ್ದೇವೆ.

ಹೌದು ! **"ಅವಳನ್ನು"** ಕುರಿತು ವಿವರವಾಗಿ ವರ್ಣಿಸಿರುವದನ್ನು ನಾವು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

## ಪ್ರಕಟನೆ 17:5

**"ಇದಲ್ಲದೆ ಮರ್ಮ, ಮಹಾ ಬಾಬೆಲು, ಭೂಮಿಯಲ್ಲಿರುವ ಜಾರಸ್ತ್ರೀಯರಿಗೂ ಅಸಹ್ಯವಾದವುಗಳಿಗೂ ತಾಯಿ ಎಂಬ ಹೆಸರು ಅವಳ ಹಣೆಯ ಮೇಲೆ ಬರೆದಿತ್ತು".**

ಈಗ, ನಮಗೆ ಚೆನ್ನಾಗಿ ಗೊತ್ತಿರುವದು ಏನೆಂದರೆ ಇಲ್ಲಿ ಸಾಂಕೇತಿಕ ಭಾಷೆಯನ್ನು ಉಪಯೋಗಿಸಲಾಗಿದೆ !

**"ಮಹಾ ಬಾಬೆಲು"** ಎಂದು ಕರೆಯಲ್ಪಡುವ ಈ **"ಸ್ತ್ರೀ"** ಯನ್ನು ಕುರಿತು ಮತ್ತೆ ವಿವರಿಸುವದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಪ್ರಕಟನೆ 17:1

**"ಏಳು ಪಾತ್ರೆಗಳನ್ನು ಹಿಡಿದಿದ್ದ ಏಳು ಮಂದಿ ದೂತರಲ್ಲಿ ಒಬ್ಬನು ಬಂದು ನನ್ನ ಸಂಗಡ ಮಾತನಾಡಿ – ಇಲ್ಲಿಗೆ ಬಾ - ಬಹಳ ನೀರುಗಳ ಮೇಲೆ ಕೂತಿರುವ ಮಹಾ ಜಾರಸ್ತ್ರೀಗೆ ಬರುವ ದಂಡನೆಯನ್ನು ನಾನು ನಿನಗೆ ತೋರಿಸುತ್ತೇನೆ".**

ಹೌದು! ಈ "ಮಹಾ ಬಾಬೆಲು" ಎಂಬುವವಳನ್ನು "ಮಹಾ ಜಾರಸ್ತ್ರೀ" ಎಂದು ಸೂಚಿಸಲಾಗಿದೆ !!

## ಈ "ಮಹಾ ಜಾರಸ್ತ್ರೀ" ಎಂದರೆ ಯಾರು ಅಥವಾ ಇದರ ಅರ್ಥ ಏನು?

ಇದು ಬೇರೆಯಾರೂ ಅಲ್ಲ – ಸ್ವಧರ್ಮ ಪರಿತ್ಯಾಗಿಯಾದ ರೋಮನ್ ಸಭೆ

**ರೋಮನ್ ಕಥೋಲಿಕ್ ಸಭೆಯನ್ನು (THE ROMAN CATHOLIC CHURCH)**

ಹೆಸರಾಂತವಾಗಿ **"ತಾಯಿ"** ಸಭೆ ಎಂದು ಸಹ ಸೂಚಿಸಲಾಗುತ್ತೆ !!

**"ಬಹಳ ನೀರುಗಳ ಮೇಲೆ ಕೂತಿರುವ"**ದೆಂದರೆ ಏನು ಸೂಚಿಸುತ್ತದೆ?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

## ಪ್ರಕಟನೆ 17:15

**"ಅವನು ನನಗೆ - ನೀನು ಕಂಡ ಆ ಜಾರಸ್ತ್ರೀಯು ಕೂತುಕೊಂಡಿರುವ ನೀರುಗಳು ಅಂದರೆ ಪ್ರಜೆಗಳೂ ಸಮೂಹಗಳೂ ಜನಾಂಗಗಳೂ ಭಾಷೆಗಳೂ ಆಗಿವೆ".**

ಹೌದು! **"ನೀರುಗಳು"** ಎಂದರೆ ಈ ಲೋಕದ ವಿವಿಧವಾದ ಜನರನ್ನು ಸೂಚಿಸುತ್ತದೆ, ಮತ್ತು **"ಬಹಳ ನೀರುಗಳ ಮೇಲೆ ಕೂತಿರುವ"** ಆ **"ಮಹಾ ಜಾರಸ್ತ್ರೀ"**ಯು **ರೋಮನ್ ಕಥೋಲಿಕ್ ಸಭೆಯನ್ನು** ಸೂಚಿಸುತ್ತದೆ.

## ಹೌದು ! ನಿಜವಾಗಿಯೂ, ರೋಮನ್ ಕಥೋಲಿಕ್ ಸಭೆಯು ಬಹುಶ: ಲೋಕದ ಎಲ್ಲಾ ದೇಶಗಳಲ್ಲಿಯೂ, ಎಲ್ಲಾ ಜನಾಂಗಗಳಲ್ಲಿಯೂ ಸ್ಥಾಪಿತವಾಗಿದೆ.



ಈಗ, ಈ **"ಮಹಾ ಬಾಬೆಲು"** – ರೋಮನ್ ಕಥೋಲಿಕ್ ಸಭೆಯನ್ನು –

**"ಜಾರಸ್ತ್ರೀಯರಿಗೂ ತಾಯಿ"("THE MOTHER OF HARLOTS")**

ಎಂದು ಕರೆಯಲಾಗುತ್ತದೆ.

ಎನ್.ಐ.ವಿ. ಸತ್ಯವೇದದಲ್ಲಿ ಇದು ಹೀಗೆ ಓದುತ್ತೇವೆ –

**"ವ್ಯಭಿಚಾರಿನಿಯರ ತಾಯಿ"("THE MOTHER OF PROSTITUTES")**

**"ಜಾರಸ್ತ್ರೀ" ಅಥವಾ "ವ್ಯಭಿಚಾರಿನಿ" ಎಂದರೆ ಅರ್ಥವೇನು?**

ಇದು ಪ್ರಕಟನ ಪುಸ್ತಕದಲ್ಲಿ "**ಸಾಂಕೇತಿಕ**"ವಾಗಿದ್ದು, ಅನ್ಯೆತಿಕ ಸಂಬಂಧವನ್ನು ಸೂಚಿಸುತ್ತದೆ.

ಇದು – ಮದಲಿಂಗನಾದ – ಯೇಸು ಕ್ರಿಸ್ತನೊಂದಿಗೆ "**ನಿಶ್ಚಯ**" ವಾಗಬೇಕಿದ್ದ ಸಭೆಯು ಅಕ್ರಮ ಸಂಬಂಧ ಹೊಂದಿರುವದನ್ನು ಸೂಚಿಸುತ್ತದೆ, ಎಂದು ಬಹಳ ಸ್ಪಷ್ಟವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ

2 **ಕೋರಿಂಥದವರಿಗೆ** 11 : 2 – **"ದೈವಾಸಕ್ತಿಯಿಂದಲೇ ನಾನು ನಿಮ್ಮ ವಿಷಯದಲ್ಲಿ ಆಸಕ್ತನಾಗಿದ್ದೇನೆ; ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಾಗಿ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲಾ"**.

**ನೋಡಿದಿರಾ? ಇದು ಬಹಳ ಸ್ಪಷ್ಟವಾಗಿದೆಯಲ್ಲವೆ ???**

ಆ ಸಭೆಯು ಯಾರ ಜೊತೆ ಒಕ್ಕೂಟವಾಗಿದ್ದಾರೆಂದು ಕೆಳಗಿನ ವಾಕ್ಯದಲ್ಲಿ ವಿವರಿಸಲಾಗಿದೆ –

**ಪ್ರಕಟನೆ 18:3**

**"ಅವಳೊಂದಿಗೆ ಭೂರಾಜರು ಜಾರತ್ವ ಮಾಡಿದರು"**

ಹೌದು! ಈ ಒಕ್ಕೂಟವು (ಐಕ್ಯವು)

– "**ಭೂರಾಜ**" ರೊಂದಿಗೆ ಉಂಟಾಗಿದೆ

ಅಥವಾ ಲೋಕದ ನಾಗರಿಕ ಅಧಿಕಾರಿಗಳೊಂದಿಗೆ ಆಗಿದೆ.

"**ಜಾರತ್ವ**" **ಎಂಬ ಪದದ ಅರ್ಥವೇನು**?

ಇದು ಸಭೆಯು ನಾಗರಿಕ ಅಧಿಕಾರಿಗಳೊಂದಿಗೆ ಅಥವ ರಾಜ್ಯ ಸರ್ಕಾರದ ಅಧಿಕಾರಿಗಳೊಂದಿಗೆ ಅಕ್ರಮ ಒಕ್ಕೂಟವಿಟ್ಟಿಕೊಂಡಿರುವದಕ್ಕಾಗಿ ಈ ಸಂಕೇತವನ್ನು ಉಪಯೋಗಿಸಿದೆ.

**"ಜಾರತ್ವ"** (FORNICATION) ಇದು ಮದುವೆಗೆ ಮುಂಚೆ ಇನ್ನೊಬ್ಬರೊಂದಿಗೆ ಇರುವ ಅಕ್ರಮ ಸಂಬಂಧವನ್ನು ಸೂಚಿಸುತ್ತದೆ.

**"ವ್ಯಭಿಚಾರ"** (ADULTERY) – ಇದು ಮದುವೆಯ ನಂತರ ಇನ್ನೊಬ್ಬರೊಂದಿಗೆ ಇರುವ ಅಕ್ರಮ ಸಂಬಂಧವನ್ನು ಸೂಚಿಸುತ್ತದೆ.

ಇಲ್ಲಿ ಸೂಚಿಸಿರುವದೇನೆಂದರೆ ಕ್ರಿಸ್ತನೊಂದಿಗೆ ತನ್ನ ಎರಡನೆಯ ಬರುವಿಕೆಯಲ್ಲಿ ಐಕ್ಯವಾಗಬೇಕಿದ್ದ ಸಭೆಯು,

**ನಾಗರಿಕ ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳೊಂದಿಗೆ ಒಕ್ಕೂಟ ಮತ್ತು ಐಕ್ಯವನ್ನು ಇಟ್ಟಿದ್ದಾರೆ.**





Francesco Pacelli and Benito Mussolini at Vatican, February 1929

Catholic Cardinal at Hitler war rally Berlin, 1935

Archbishop Orsenigo's annual birthday party for Hitler, 1935

ಈ ಅಕ್ರಮವಾದ ಒಕ್ಕೂಟದ ಪರಿಣಾಮವಾಗಿಯೇ ಸಾಮ್ರಾಜ್ಯವಾದ –

**"ಪರಿಶುದ್ಧ ರೋಮ್ ಸಾಮ್ರಾಜ್ಯ"**ವು ಸ್ಥಾಪನೆಯಾಯಿತು.

ಇವರು ಕ್ರಿ.ಶ.799 ರಿಂದ ಕ್ರಿ.ಶ. 1799 ವರೆಗೆ ಆಳ್ವಿಕೆ ಮಾಡಿದರು.

ಇವೆಲ್ಲವೂ ಕರ್ತನ ಎರಡನೆಯ ಬರುವಿಕೆ ಮತ್ತು **"ಯಜ್ಞದ ಕುರಿಯಾದಾತನ ಮದುವೆಗೆ"** ಮುಂಚೆ ನಡೆಯಿತು.

ಇದನ್ನು ಸಾಂಕೇತಿಕವಾಗಿ "ಜಾರತ್ವ" ಎಂದು ಸೂಚಿಸಲಾಗಿದೆ.

"ರೋಮನ್ ಕಥೋಲಿಕ್ ಸಭೆಯನ್ನು ಇಲ್ಲಿ "ಜಾರಸ್ತ್ರೀಯರಿಗೆಲ್ಲಾ ತಾಯಿ" ಎಂದು ಗುರುತಿಸಿದ ಮೇಲೆ,

ತನ್ನ "**ತಾಯಿ**"ಯಂತೆ "**ಜಾರತ್ವ**" ಮಾಡಿದೆ ಎಂದು ಸೂಚಿಸಿರುವ "**ಮಕ್ಕಳು**"......... ಯಾರು?

**ಆಹ್ ! ಅವರು ರೋಮನ್ ಕಥೋಲಿಕ್ ಸಭೆಯಿಂದ ಹೊರಗೆ ಬಂದ ಸಭೆಗಳು !!**

**................ಪ್ರಾಟೆಸ್ಟಂಟ್ ಸಭೆಗಳು.**

ಹೌದು ! ಜನರ ಮೇಲೆ ಅಧಿಕಾರ ಸಲ್ಲಿಸಲು ಈ ಸಭೆಗಳು ಅನೇಕ ವಿಭಾಗದ ಹೆಸರುಗಳೊಂದಿಗೆ ಪ್ರತಿಯೊಂದು ಸಭೆಗಳೂ ತಮ್ಮದೇ ಆದ ದಾರಿಯಲ್ಲಿ ಈ ನಾಗರಿಕ ಅಧಿಕಾರಿಗಳ ದಯೆ ಮತ್ತು ಒಕ್ಕೂಟವನ್ನು ಹೊಂದಿಕೊಳ್ಳುವದಕ್ಕಾಗಿ ಹುಡುಕುತ್ತಾರೆ.

"**ಬಾಬೆಲ್**" ಎಂಬ ಪದವು "**ತಾಯಿ ಮತ್ತು ಮಗಳು**" ಎರಡನ್ನೂ ಸೇರಿ ವಿವರಿಸುತ್ತವೆ.

....ಹೆಸರಿಗೆ ಮಾತ್ರ ಸಭೆಯ ವ್ಯವಸ್ಥೆಯ ಎರಡು ಭಾಗಗಳಾಗಿದ್ದು,

....ರೋಮನ್ ಕಥೋಲಿಕ್ ಸಭೆ

ಮತ್ತು .......... ಪ್ರಾಟೆಸ್ಟಂಟ್ ಸಭೆಗಳ ಒಕ್ಕೂಟವಾಗಿದೆ.

ಈ "**ವ್ಯವಸ್ಥೆಗಳ ವ್ಯವಸ್ಥೆ**" ಅಥವಾ "**ಮಹಾ ಬಾಬೆಲು**" ಅನ್ನು ಕರ್ತನ ಎರಡನೇ ಬರುವಿಕೆಯ ಸ್ವಲ್ಪ ಕಾಲದ ನಂತರದಲ್ಲಿ ನಿರಾಕರಿಸಲ್ಪಟ್ಟಿತು ಎಂಬುದನ್ನು ಸ್ಪಷ್ಟವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 18:1-2**

"ಇವುಗಳಾದ ಮೇಲೆ ಮಹಾ ಅಧಿಕಾರವುಳ್ಳ ಮತ್ತೊಬ್ಬ ದೂತನು ಪರಲೋಕದಿಂದ ಇಳಿಯುವದನ್ನು ಕಂಡೆನು; ಅವನ ಪ್ರಭಾವದಿಂದ ಭೂಮಿಗೆ ಪ್ರಕಾಶವುಂಟಾಯಿತು. ಅವನು ಗಟ್ಟಿ ಯಾದ ಶಬ್ದದಿಂದ ಕೂಗುತ್ತಾ--ಮಹಾಬಾಬೆಲ್ ಬಿದ್ದಳು, ಬಿದ್ದಳು; ದೆವ್ವಗಳ ವಾಸಸ್ಥಾನವೂ ಅಶುದ್ಧಾತ್ಮಗಳ ಆಶ್ರಯವೂ ಅಪವಿತ್ರವಾಗಿಯೂ ಅಸಹ್ಯವಾಗಿಯೂ ಇರುವ ಸಕಲ ವಿಧವಾದ ಪಕ್ಷಿಗಳ ಪಂಜರವೂ ಆದಳು."

ಹೌದು ! ಇದು ಕರ್ತನಾದ ಯೇಸು ತನ್ನ ಎರಡನೆ ಬರುವಿಕೆಯಲ್ಲಿ "**ಬಾಬೆಲ್**" ಮೇಲೆ ನ್ಯಾಯತೀರ್ಪು ಹೇಳುವದನ್ನು ಹೀಗೆ ಓದುತ್ತೇವೆ –

"ಮಹಾ ಬಾಬೆಲ್ ಬಿದ್ದಳು, ಬಿದ್ದಳು".

ಇಲ್ಲಿ "ಬಿದ್ದಳು" ಎಂದು ಎರಡು ಸಾರಿ ಹೇಳಿರುವದು "ಬಾಬೆಲ್"ನ ಎರಡು ಭಾಗಗಳು ಅಥವಾ –

............**"ಚರ್ಚಿಯಾನಿಟಿ"** ಅಥವಾ ಹೆಸರಿಗೆ ಮಾತ್ರ ಇರುವ ಎರಡು ವಿಭಾಗಗಳನ್ನು ಸೂಚಿಸುತ್ತದೆ !!.

ಇವರೆರಡೂ ವಿಭಾಗಗಳು ಕರ್ತನ ದಯೆಯಿಂದ ನಿಕರಾಕರಿಸಲ್ಪಟ್ಟವು ಎಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಪ್ರಕಟಣೆ 3:15-18**

**"ನೀನು ತಣ್ಣಗೂ ಬೆಚ್ಚಗೂ ಅಲ್ಲದಿರುವ ನಿನ್ನ ಕ್ರಿಯೆಗಳನ್ನು ನಾನು ಬಲ್ಲೆನು; ನೀನು ತಣ್ಣಗಾಗಲಿ ಬೆಚ್ಚಗಾಗಲಿ ಇರಬೇಕೆಂಬದು ನನ್ನ ಇಷ್ಟವಾಗಿತ್ತು. ಆದರೆ ನೀನು ತಣ್ಣಗಾಗಲಿ ಇಲ್ಲವೆ ಬೆಚ್ಚಗಾಗಲಿ ಇಲ್ಲದೆ ಉಗುರು ಬೆಚ್ಚಗಿರುವದರಿಂದ ನಿನ್ನನ್ನು ನಾನು ನನ್ನ ಬಾಯೊಳಗಿಂದ ಕಾರುವೆನು. ನೀನು--ನಾನು ಐಶ್ವರ್ಯವಂತನು, ಧನವೃದ್ಧಿಯುಳ್ಳವನು, ಯಾವದರ ಲ್ಲಿಯೂ ಕೊರತೆಯಿಲ್ಲದವನು ಎಂದು ಹೇಳಿಕೊಳ್ಳುತ್ತೀ; ಆದರೆ ನೀನು ಕೇವಲ ನಿರ್ಗತಿಕನು, ದರಿದ್ರನು, ಬಡವನು, ಕುರುಡನು, ಬೆತ್ತಲೆಯಾದವನು ಆಗಿರುವ ದನ್ನು ತಿಳಿಯದೆ ಇದ್ದೀ. ನೀನು ಐಶ್ವರ್ಯವಂತ ನಾಗುವ ಹಾಗೆ ಬೆಂಕಿಯಲ್ಲಿ ಶೋಧಿಸಿದ ಚಿನ್ನವನ್ನೂ ಲಜ್ಜಾಸ್ಪದವಾದ ನಿನ್ನ ಬೆತ್ತಲೆತನ ಕಾಣಿಸದಂತೆ ಹೊದ್ದು ಕೊಳ್ಳುವದಕ್ಕಾಗಿ ಬಿಳೀ ವಸ್ತ್ರವನ್ನೂ ಕಣ್ಣು ಕಾಣುವಂತೆ ನಿನ್ನ ಕಣ್ಣುಗಳಿಗೆ ಹಚ್ಚುವದಕ್ಕಾಗಿ ಅಂಜನವನ್ನೂ ನನ್ನಿಂದ ಕೊಂಡುಕೊಳ್ಳಬೇಕೆಂದು ನಿನಗೆ ಬುದ್ಧಿ ಹೇಳುತ್ತೇ"**

ಈ ವಾಕ್ಯಗಳನ್ನು ಕರ್ತನು ಈ ಹೆಸರಿಗೆ ಮಾತ್ರ ಇರುವ ಸಭೆಗಳನ್ನು ತನ್ನ ದಯೆ ಮತ್ತು ಅಂಗೀಕೃತದಿಂದ ನಿರಾಕರಿಸಲ್ಪಟ್ಟದಾಗಿಯೂ ಸೂಚಿಸುವದಕ್ಕಾಗಿ ಉಪಯೋಗಿಸಿದನು.

ಇಲ್ಲಿ ಉಪಯೋಗಿಸಿರುವ ಪದಗಳನ್ನು ಗಮನಿಸಿರಿ –

**"ಆದರೆ ನೀನು ತಣ್ಣಗಾಗಲಿ ಇಲ್ಲವೆ ಬೆಚ್ಚಗಾಗಲಿ ಇಲ್ಲವೆ ಉಗುರು ಬೆಚ್ಚಿಗಿರುವುದರಿಂದ ನಿನ್ನನ್ನು ನಾನು ನನ್ನ ಬಾಯೊಳಗಿಂದ ಕಾರುವೆನು".**

**ಇದರ ಅರ್ಥವೇನು?**

ಇದರ ಅರ್ಥ ಏನೆಂದರೆ ವಾಂತಿ ಮಾಡುವದು ಎಂದಾಗಿದೆ !

ಇದು ಸಾಂಕೇತಿಕ ಭಾಷೆಯಾಗಿದ್ದು, ಹೇಗೆ ಹೆಸರಿಗೆ ಮಾತ್ರ ಸಭೆಗಳು ತಮ್ಮ – **"ಉಗುರು ಬೆಚ್ಚಗೆ"** ಇರುವುದರಿಂದ ಕರ್ತನ ವಾಕ್ಯದ "ವಕ್ತಾರ"ರಾಗಿ (**Mouth piece**) ಇರುವುದರಿಂದ ನಿರಾಕರಿಸಲ್ಪಟ್ಟಿದ್ದನ್ನು ಸೂಚಿಸುತ್ತದೆ.

## ಈ "ಉಗುರು ಬೆಚ್ಚಗೆ" ಎಂದರೆ ಅರ್ಥವೇನು?

ಇದು ತಣ್ಣಗೂ ಇಲ್ಲದೆ ಬೆಚ್ಚಗೂ ಇಲ್ಲದೆ ಇರುವ ಸ್ಥಿತಿಯಾಗಿದೆ.

ಈಗ ನಾವು ಇದರ ಸಾಂಕೇತಿಕ ಅರ್ಥವನ್ನು ನೋಡೋಣ –

### "ತಣ್ಣಗಾಗಲಿ (ಇಲ್ಲದೆ)"

ಇದು ಕರ್ತನನ್ನು ಸಂಪೂರ್ಣವಾಗಿ ನಿರಾಕರಿಸಿದೆ, **"ಕ್ರೈಸ್ತರು"** ಎಂದು ಆತನ ಹೆಸರನ್ನು ಹೇಳಿಕೊಳ್ಳುವದಕ್ಕಾಗಿ ಮಾತ್ರ ಹುಡುಕುವದನ್ನು ಸೂಚಿಸುತ್ತದೆ.

### "ಬೆಚ್ಚಗಾಗಲಿ (ಇಲ್ಲದೆ)"

ಇದು ಸತ್ಯಕ್ಕಾಗಿ ಇರುವ ವೈರಾಗ್ಯದಲ್ಲಿ ಕೊರತೆ ಇರುವದನ್ನು ಸೂಚಿಸುತ್ತದೆ.

ಈತನ "ಕತ್ತಲೆ"ಯ ಆಳ್ವಿಕೆಯ ಸನ್ನಿವೇಶಗಳಲ್ಲಿ, ಸತ್ಯವನ್ನು ಅಂಗೀಕರಿಸುವದು ಮತ್ತು ಅದಕ್ಕೆ ವಿಧೇಯರಾಗಿರುವದು ಇವೆರಡರಲ್ಲೂ ಕೊರತೆ ಇರುವದನ್ನು ಸೂಚಿಸುತ್ತದೆ.

ಹೌದು ! ಈ ಹೆಸರಿಗೆ ಮಾತ್ರ ಸಭೆಗಳ ಸ್ಥಿತಿಯನ್ನು ಪ್ರವಾದನೆಯಾಗಿ ವಿವರಿಸಿರುವದನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಯೆಶಾ 4:1**

**"ಆ ದಿವಸದಲ್ಲಿ ಏಳು ಮಂದಿ ಹೆಂಗಸರು ಒಬ್ಬ ಮನುಷ್ಯನನ್ನು ಹಿಡಿದು--ನಾವು ಸ್ವಂತವಾಗಿ ದುಡಿದು ಉಣ್ಣುವೆವು; ನಾವೇ ಸಂಪಾದಿಸಿ ವಸ್ತ್ರಗಳನ್ನು ಉಟ್ಟುಕೊಳ್ಳುವೆವು; ನಮ್ಮ ನಿಂದೆಯನ್ನು ನೀಗಿಸುವದಕ್ಕೆ ನಿನ್ನ ಹೆಸರು ನಮಗಿದ್ದರೆ ಸಾಕು ಎಂದು ಕೇಳಿಕೊಳ್ಳುವರು ಎಂಬದೇ."**

ಹೌದು ! ಈ **"ಏಳು ಮಂದಿ ಹೆಂಗಸರು"** ಎಂದರೆ ಹೆಸರಿಗೆ ಮಾತ್ರ ಕ್ರೈಸ್ತರಾಗಿರುವ ಎಲ್ಲರನ್ನು ಸೇರಿಸಿ ಸೂಚಿಸುತ್ತದೆ 1


ಹೌದು ! **"ಮಹಾ ಬಾಬೆಲ್"**

ಆದ್ದರಿಂದ, ಅವರನ್ನು ಸಾಂಕೇತಿಕವಾಗಿ ವಿವರಿಸಿರುವದನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ.

### "......ನಾವು ಸ್ವಂತವಾಗಿ ದುಡಿದು ಉಣ್ಣುವೆವು......"

ಇಲ್ಲಿ **"ರೊಟ್ಟಿ"** ಎಂದರೆ ನೈಸರ್ಗಿಕವಾದ ರೊಟ್ಟಿಯನ್ನು ಸೂಚಿಸುತ್ತಿಲ್ಲ,

ಆದರೆ ಇದು ಆತ್ಮೀಕ ರೊಟ್ಟಿಯನ್ನು ಕುರಿತು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಮತ್ತಾಯ** 4 : 4 – **"ಆದರೆ ಆತನು ಪ್ರತ್ಯುತ್ತರವಾಗಿ - ಮನುಷ್ಯನು ರೊಟ್ಟಿ ಮಾತ್ರದಿಂದಲೇ ಜೀವಿಸುವುದಿಲ್ಲ, ಆದರೆ ದೇವರ ಬಾಯೊಳಗಿಂದ ಹೊರಡುವ ಪ್ರತಿಯೊಂದು ಮಾತಿನಿಂದ ಜೀವಿಸುವನು ಎಂದು ಬರೆದಿದೆ ಅಂದನು".**

ಹೌದು ! ಯೇಸು ಇಲ್ಲಿ ಆತ್ಮೀಕ ಆಹಾರವನ್ನು ಕುರಿತು ಮಾತನಾಡುತ್ತಿದ್ದಾನೆ ಮತ್ತು ಅದನ್ನು ತಿನ್ನಬೇಕು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆರೆಮೀಯ** 15:16 – **"ನಿನ್ನ ವಾಕ್ಯಗಳು ಸಿಕ್ಕಿದವು, ಅವುಗಳನ್ನು ತಿಂದೆನು; ನಿನ್ನ ವಾಕ್ಯವು ನನ್ನ ಹೃದಯಕ್ಕೆ ಉಲ್ಲಾಸವೂ ಸಂತೋಷವೂ ಆಗಿತ್ತು. ಓ ಸೈನ್ಯಗಳ ದೇವರಾದ ಕರ್ತನೇ, ನಿನ್ನ ಹೆಸರಿನಿಂದ ಕರೆಯಲ್ಪಟ್ಟಿದ್ದೇನೆ".**

ಹೌದು ! ದೇವರ ವಾಕ್ಯಗಳು ಆತ್ಮೀಕ "ಆಹಾರ"ವಾಗಿದೆ.
ಮತ್ತು ಇನ್ನೂ ದೇವರ ವಾಕ್ಯವನ್ನು ಕುರಿತು ಹೀಗೆ ಓದುತ್ತೇವೆ –

**ಯೋಹಾನ** 17 : 17
**"........ ನಿನ್ನ ವಾಕ್ಯವೇ ಸತ್ಯವು".**



**ಹೌದು ! ದೇವರ ವಾಕ್ಯಗಳು ಅಥವಾ "ರೊಟ್ಟಿ"ಯು ಸತ್ಯವಾಗಿದೆ.**

ಆದರೆ, ಇಲ್ಲಿ ನಾವು ನೋಡುವದೇನೆಂದರೆ, ಈ "ಏಳು ಮಂದಿ ಹೆಂಗಸರು" ಹೀಗೆ ಹೇಳುತ್ತಾರೆ...........

"ನಾವು ಸ್ವಂತವಾಗಿ ದುಡಿದು (ರೊಟ್ಟಿಯನ್ನು) ತಿನ್ನುವೆವು".

ಹೌದು! ಈ ಹೆಸರಿಗೆ ಮಾತ್ರ ಕ್ರೈಸ್ತರು ಅವರ **"ಸ್ವಂತ ರೊಟ್ಟಿ"** ಅಥವಾ **"ಸ್ವಂತ ಸತ್ಯ"** ಗಳಿಗಾಗಿ ಒತ್ತಾಯ ಮಾಡುತ್ತಾರೆ. ಆದರೆ ಅವೆಲ್ಲವೂ ತಪ್ಪಾದ ಬೋಧನೆಗಳಾಗಿವೆ ಮತ್ತು ಸತ್ಯವೇದದಲ್ಲಿ ಅವುಗಳು ಕಾಣುವದೇ ಇಲ್ಲ.

ಇನ್ನೂ ನಾವು ಹೀಗೆ ಓದುತ್ತೇವೆ.

**"........ನಾವೇ ಸಂಪಾದಿಸಿ ವಸ್ತ್ರಗಳನ್ನು ಉಟ್ಟುಕೊಳ್ಳುವೆವು"**

ಇಲ್ಲಿ ವಸ್ತ್ರ ಅಥವಾ ಬಟ್ಟೆಗಳು (ಎನ್.ಐ.ವಿ.ಯಲ್ಲಿ) ಎಂದರೆ ಪಾಪವನ್ನು ಮರೆಮಾಡುವದು ಎಂದು ಸೂಚಿಸುತ್ತದೆ.

ಏಕೆಂದರೆ, ಮೊದಲ ಮನುಷ್ಯನು (ಆದಾಮನು) ಪಾಪ ಮಾಡಿದಾಗ ಅವನು ತನ್ನನ್ನು **"ಮರೆ"** ಮಾಡಿಕೊಳ್ಳುವದಕ್ಕಾಗಿ ಹುಡುಕಿದನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –




**ಆದಿಕಾಂಡ 3:7**

**"ಆಗ ಅವರಿಬ್ಬರ ಕಣ್ಣುಗಳು ತೆರೆಯಲ್ಪಟ್ಟವು. ತಾವು ಬೆತ್ತಲೆಯಾಗಿದ್ದೇವೆಂದು ತಿಳಿದುಕೊಂಡರು ; ಅವರು ಅಂಜೂರದ ಎಲೆಗಳನ್ನು ಹೊಲಿದುಕೊಂಡು ತಮಗೆ ತಾವೇ ಉಡುಗೆಗಳನ್ನು ಮಾಡಿಕೊಂಡರು".**

ಹೌದು ! **"ವಸ್ತ್ರ"** ವು ಪಾಪವನ್ನು ಮರೆಮಾಡುವದನ್ನು ಸೂಚಿಸುತ್ತದೆ ಮತ್ತು ಪಾಪವನ್ನು ಮರೆಮಾಡಲು ಇರುವ ನಿಜವಾದ **"ವಸ್ತ್ರ"** ವನ್ನು ಕುರಿತು ವಿವರಿಸಿರುವದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಯೆಶಾ 61:10

"ನಾನು ಕರ್ತನಲ್ಲಿ ಬಹಳವಾಗಿ ಸಂತೋಷಿ ಸುವೆನು; ನನ್ನ ಪ್ರಾಣವು ನನ್ನ ದೇವರಲ್ಲಿ ಉಲ್ಲಾಸ ಪಡುವದು; ಯಾಕಂದರೆ ಮದಲಿಂಗನು ಸೌಂದರ್ಯ ವಾಗಿ ತನ್ನನ್ನು ಶೃಂಗರಿಸುವ ಹಾಗೆಯೂ ಮದಲ ಗಿತ್ತಿಯು ಆಭರಣಗಳಿಂದ ತನ್ನನ್ನು ಅಲಂಕರಿಸುವ ಹಾಗೆಯೂ ಆತನು ರಕ್ಷಣೆಯ ವಸ್ತ್ರಗಳನ್ನು ನನಗೆ ತೊಡಿಸಿದ್ದಾನೆ, ನೀತಿಯ ನಿಲುವಂಗಿಯನ್ನು ನನಗೆ ಧರಿಸುವಂತೆ ಮಾಡಿದ್ದಾನೆ."



ಹೌದು! "ನಿಲುವಂಗಿ" ಯು ಒಬ್ಬ ವ್ಯಕ್ತಿಯನ್ನು ನೀತಿವಂತನಾಗಿ ಮಾಡುತ್ತದೆ

ಮತ್ತು ಯೇಸುಕ್ರಿಸ್ತನು ಕಳ್ವಾರಿ ಶಿಲುಬೆಯಲ್ಲಿ ಸುರಿಸಿದ ಈಡು ಬಲಿಯ ರಕ್ತ ಮತ್ತು ಪುಣ್ಯವು (MERIT) ಪಾಪಗಳನ್ನು ಪೂರ್ತಿಯಾಗಿ ಮರೆಮಾಡುತ್ತದೆ.

ಆದರೆ, ನಾವು ನೋಡುವದೇನೆಂದರೆ, ಸಭೆಗಳು ಹೀಗೆ ಹೇಳುತ್ತಾರೆ – **"ನಾವೇ ಸಂಪಾದಿಸಿ ವಸ್ತ್ರಗಳನ್ನು ಉಟ್ಟುಕೊಳ್ಳುವೆವು"**.

ಇಲ್ಲಿ "**ಸ್ವಂತ ವಸ್ತ್ರಗಳು**" ಎಂದರೆ ಒಳ್ಳೆಯ ಕ್ರಿಯೆಗಳಾದ ದಾನ ಧರ್ಮ ಮತ್ತು ಸಮಾಜ ಸೇವೆ – ಇವುಗಳು ತಮ್ಮ ಪಾಪಗಳನ್ನು "**ಮರೆಮಾಡುತ್ತದೆ**" ಎಂದು ಹೇಳುತ್ತಾರೆ, ಆದರೆ ಇಂತಹ ನೀತಿಯ ಕ್ರಿಯೆಗಳನ್ನು ಕುರಿತು ಸತ್ಯವೇದವು ಹೀಗೆ ಹೇಳುತ್ತದೆ.



**ಯೆಶಾಯ 64 : 6** - "ನಾವೆಲ್ಲರೂ ಅಶುದ್ಧವಾದದ್ದರ ಹಾಗೆ ಇದ್ದೇವೆ; ನಮ್ಮ ನೀತಿಕಾರ್ಯಗಳು ಮೈಲಿಗೆ ವಸ್ತ್ರದ ಹಾಗವೆ; ನಾವೆಲ್ಲರೂ ಎಲೆಯ ಹಾಗೆ ಬಾಡುತ್ತೇವೆ; ನಮ್ಮ ಅಕ್ರಮಗಳು ಗಾಳಿಯಂತೆ ನಮ್ಮನ್ನು ಎತ್ತಿಕೊಂಡು ಹೋಗಿವೆ".

ಆದರೂ ಈ ಹೆಸರಿಗೆ ಮಾತ್ರ ಕ್ರೈಸ್ತರೆಲ್ಲರೂ ಹೀಗೆ ಹುಡುಕುತ್ತಾರೆಂದು ಓದುತ್ತೇವೆ –

"………. ನಿನ್ನ ಹೆಸರು ನಮಗಿದ್ದರೆ ಸಾಕು".

ಹೌದು ! ಇದು ಹೇಗೆ ಈ ಸಭೆಗಳು ಯೇಸುವಿನ ಹೆಸರನ್ನು ಮಾತ್ರ ಹುಡುಕುತ್ತದೆ. ………. ಆದರೆ ದೇವರ ಸತ್ಯವಾಕ್ಯವನ್ನು ಹುಡುಕುವದಿಲ್ಲ.

ಅವರಿಗೆ ಯೇಸುವಿನ ಹೆಸರು ಬೇಕು ಮತ್ತು

**"ಕ್ರೈಸ್ತ ಸಭೆಗಳು"** ಎಂದು ಗುರುತಿಸಿಕೊಳ್ಳಬೇಕು.

**ಹೌದು ! ಇದು ಇಡೀ ಸುವಾರ್ತಾಯುಗದ ಸಭೆಯ ಏಳು ಹಂತಗಳಲ್ಲಿರುವ ಸ್ಥಿತಿಯಾಗಿದೆ.**

ಆದರೆ ಕರ್ತನ ಎರಡನೆ ಬರುವಿಕೆಯಲ್ಲಿ ಆತನು ಎಲ್ಲಾ ವ್ಯವಸ್ಥೆಯನ್ನು ನಿರಾಕರಿಸಿದಾಗ ಇವೆಲ್ಲವೂ ಕೊನೆಗೊಂಡಿತು.

**ನಾವು ಕರ್ತನು ನಿರಾಕರಿಸಿದ ದಿನಾಂಕ ಅಥವಾ ವರ್ಷವನ್ನು ಸರಿಯಾಗಿ ಗುರುತಿಸಬಹುದೆ?**

ನಮಗೆ ಗೊತ್ತಿರುವದೇನೆಂದರೆ, ಅಕ್ಟೋಬರ್ 1874 ರಲ್ಲಿ ನಮ್ಮ ಕರ್ತನ ಎರಡನೆ ಬರುವಿಕೆಯ ಸ್ವಲ್ಪ ಕಾಲದ ನಂತರ ಇದಾಯಿತು !

ನಿಮಗೆ ಆಶ್ಚರ್ಯವಾಗುತ್ತಿರಬಹುದು. …….. ಹೇಗೆ ಈ ದಿನಾಂಕ ವನ್ನು ಅಕ್ಟೋಬರ್ ತಿಂಗಳಲ್ಲಿ ಆತನ ಎರಡನೆಯ ಬರುವಿಕೆಯಾಯಿತು !!.

ಅಕ್ಟೋಬರ್ ತಿಂಗಳು ರಾಜ್ಯದ ಆರಂಭ ಎಂದು ಗುರುತಿಸಲಾಯಿತು ಮತ್ತು ಕರ್ತನ ಎರಡನೆಯ ಬರುವಿಕೆಗೆ ಸೂಕ್ತ ಕಾಲವಾಗಿದೆ ಮತ್ತು ಕರ್ತನ ಬರುವಿಕೆ ಮತ್ತು ರಾಜ್ಯವನ್ನು ಆರಂಭಿಸಲು ಅರ್ಥವುಳ್ಳ ತಿಂಗಳಾಗಿದೆ. ಏಕೆಂದರೆ, ಅದೇ ತಿಂಗಳಿನಲ್ಲಿ ಕರ್ತನು

......... ಕ್ರಿ.ಪೂ. 2 ರಲ್ಲಿ "ಶರೀರ" ಧಾರಿಯಾಗಿ ಹುಟ್ಟಿದನು

........ ಮತ್ತು ತನ್ನ ದೀಕ್ಷಾಸ್ನಾನದಲ್ಲಿ ಹೊಸ ಸೃಷ್ಟಿಯಾಗಿ ಯೋರ್ದಾನ್ ನದಿಯಲ್ಲಿ ಗರ್ಭಧಾರಣೆಯಾದನು (ಭ್ರೂಣಾಂಕುರಗೊಂಡನು) (BEGOTTEN). ಆಗ ಅಂದರೆ ಕ್ರಿ.ಶ. 29 ರಲ್ಲಿ ಆತನಿಗೆ 30 ವರ್ಷವಾಗಿತ್ತೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ – ಲೂಕ 3:23


"ಯೇಸು ಹೆಚ್ಚುಕಡಿಮೆ ಮೂವತ್ತು ವರುಷದವನಾದನು, ಆತನು ಯೋಸೇಫನ ಮಗನೆಂದು (ಎಣಿಸಲ್ಪಟ್ಟನು) ; ಯೋಸೇಪನು ಹೇಲೀಯ ಮಗನು".

**ಹೌದು! ಕರ್ತನು ತಾನು ಎರಡನೆ ಬರುವಿಕೆಯ ನಂತರ "ಬಾಬೆಲ್" ಅನ್ನು ನಿರಾಕರಿಸಿದ ವರ್ಷವನ್ನು ನಾವು ಗುರುತುಸಬಹುದೆ?**

ಇದರ ಉತ್ತರಕ್ಕಾಗಿ ಕೆಳಗಿನ ವಾಕ್ಯವನ್ನು ನೋಡೋಣ –

**ಪ್ರಕಟಣೆ 6:10-11**

"ಅವರು--ಓ ಕರ್ತನೇ, ಪರಿಶುದ್ಧನೂ ಸತ್ಯವಂತನೂ ಆಗಿರುವಾತನೇ, ಭೂಮಿಯ ಮೇಲೆ ವಾಸಿಸುವವರು ನಮ್ಮ ರಕ್ತವನ್ನು ಸುರಿಸಿದ್ದಕ್ಕಾಗಿ ನೀನು ಎಷ್ಟು ಕಾಲದವರೆಗೆ ನ್ಯಾಯವಿಚಾರಿಸದೆಯೂ ಪ್ರತಿದಂಡನೆ ಮಾಡದೆಯೂ ಇರುವಿ ಎಂದು ಮಹಾಶಬ್ದದಿಂದ ಕೂಗುತ್ತಾ ಹೇಳಿದರು. ಅವರಲ್ಲಿ ಒಬ್ಬೊಬ್ಬನಿಗೆ ಬಿಳೀ ನಿಲುವಂಗಿಗಳು ಕೊಡಲ್ಪಟ್ಟಿದ್ದವು. ಇದಲ್ಲದೆ ಅವರ ಹಾಗೆ ಅವರ ಜೊತೆ ಸೇವಕರ ಮತ್ತು ಅವರ ಸಹೋದರರ ಕೊಲೆಯು ಪೂರೈಸುವ ತನಕ ಇನೂ ಸ್ವಲ್ಪ ಕಾಲ ವಿಶ್ರಮಿಸಿಕೊಂಡಿರಬೇಕೆಂದು ಅವರಿಗೆ ಹೇಳಲ್ಪಟ್ಟಿತು."

 ಹೌದು ! ಈ ವಾಕ್ಯದಲ್ಲಿಯೇ ಇದಕ್ಕೆ ಉತ್ತರವನ್ನು ಕಾಣಬಹುದು !

**ನಿಮಗೆ ಕಾಣುತ್ತಿದೆಯೆ ? ಆಹ್ ! ಅದು ಮರೆಮಾಡಲಾಗಿದೆ !!**

ಈಗ ನಾವು ಇದರ ಉತ್ತರವನ್ನು ಭೇದಿಸೋಣ !!

ಈ ವಾಕ್ಯವು ಐದನೆಯ ಸಭೆಯ ಕಾಲದ ಸಾರ್ದಿಸಿನ ಸಭೆಗೆ ಸೂಚಿಸುವದನ್ನು ಕುರಿತು ಹೇಳುತ್ತದೆ.

ಕ್ರಿ.ಶ. 1367 ರಿಂದ............ 1517 ವರೆಗೆ ಇದ್ದ ನಂಬಿಕಸ್ತರಾದ ಸಭೆಯ ಅಂಗದವರು ಮಹಾ ಉಪದ್ರವದಲ್ಲಿದ್ದಾಗ ಸಾಂಕೇತಿಕವಾಗಿ ದೈವೀಕ ನ್ಯಾಯ ತೀರ್ಪಿಗಾಗಿ ದೇವರ ಬಳಿ "ಕೂಗುವುದನ್ನು" ಸೂಚಿಸುತ್ತದೆ !

ಇದು ಬಹುತೇಕ ಹೇಬೆಲನ ರಕ್ತದ ಹಾಗೆ ಮಾತನಾಡುವುದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಹೇಳುತ್ತದೆ –

**ಇಬ್ರಿಯರಿಗೆ** 12 : 24 - **"ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ ಯೇಸುವಿನ ಬಳಿಗೂ ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತನಾಡುವ ಪ್ರೋಕ್ಷಣ ರಕ್ತದ ಬಳಿಗೂ ಬಂದಿದ್ದೀರಿ."**

ಹೌದು ! ಇದು ವಿಶೇಷವಾಗಿ ಸುಧಾರಣೆಯ ಸಮಯದಲ್ಲಿ ದೇವರ ನಿಜವಾದ ಮತ್ತು ನಂಬಿಗಸ್ತರಾದ ಮಕ್ಕಳಿಗೆ ಸತ್ಯವೇದದ ಸತ್ಯಗಳು ಮತ್ತು ಜ್ಞಾನವು ವ್ಯಕ್ತವಾಯಿತು. ಆ ಸಮಯದಲ್ಲಿ ಅಧಿಕಾರದಲ್ಲಿದ್ದ ಹೆಸರಿಗೆ ಮಾತ್ರ ಕ್ರೈಸ್ತರ ನಿಜವಾದ ಸ್ವಭಾವ ಮತ್ತು ಗುರುತನ್ನು ವ್ಯಕ್ತಪಡಿಸಿದರು !

ಆಗಲೇ ಅವರು (ನಂಬಿಗಸ್ತರಾದ ದೇವರ ಮಕ್ಕಳು) ಯಾವಾಗ ದೇವರ ನ್ಯಾಯತೀರ್ಪು ಇವರ ಮೇಲೆ ಉಂಟಾಗುತ್ತದೆ ಎಂದು ಎದುರು ನೋಡುತ್ತಿದ್ದರು?

ಮತ್ತು ಇವರಿಗೆ ದೊರೆತ ಉತ್ತರ ಏನೆಂದರೆ –

**"....... ಇನ್ನೂ ಸ್ವಲ್ಪ ಕಾಲ ವಿಶ್ರಮಿಸಿಕೊಂಡಿರಬೇಕೆಂದು ಅವರಿಗೆ ಹೇಳಲ್ಪಟ್ಟಿತು".**

ಈ **"ಸ್ವಲ್ಪಕಾಲ"** ಎಂಬುದು ಗ್ರೀಕ್ ಪದಗಳಿಂದ ಭಾಷಾಂತರಿಸಲ್ಪಟ್ಟಿದೆ –

**"ಕ್ರೋನೋಸ್"** **(Chronos)** ಇದರ ಅರ್ಥ **"ಕಾಲ"**

ನಾವು ಅಭ್ಯಾಸ # 28 – **"ಕಾಲಗಳ ಪ್ರವಾದನೆಗೆ ಬೀಗದಕೈಗಳು"** ನೆನಪಿಗೆ ತಂದುಕೊಂಡರೆ, ಈ **"ಕಾಲ"** ಎಂಬ ಪದಗಳು 360 **"ಪ್ರವಾದನೆಯ ದಿನಗಳ"** ಕಾಲಾವಧಿಯ ಒಂದು ಪ್ರವಾದನೆ ವರ್ಷದ ಕಾಲಾವಧಿಯನ್ನು ಸೂಚಿಸುತ್ತದೆ.

ಆದ್ದರಿಂದ ಇದು ನೇರವಾದ ಕಾಲಾವಧಿಯಲ್ಲಿ **360 ವರ್ಷಗಳಿಗೆ** ಸಮಾನವಾಗಿದೆ.

**ಹೌದು! ದೇವರು ಇಲ್ಲಿ ಹೇಳುತ್ತಿರುವ "ಸ್ವಲ್ಪ ಕಾಲ" ಎಂದರೆ ...... ನಿಜವಾದ (ನೇರವಾಗಿ) 360 ವರ್ಷಗಳನ್ನು ಸೂಚಿಸುತ್ತದೆ !**

"ಬಾಬೆಲ್" ಮಾನಸಾಂತರ ಹೊಂದಬೇಕೆಂದು ದೇವರು ಕೊಟ್ಟ ಕಾಲವಿದು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆರೆಮೀಯ 51:9**

**"ನಾವು ಬಾಬೆಲನ್ನು ವಾಸಿಮಾಡುವವದಕ್ಕಿದ್ದೆವು. ಆದರೆ ಅದು (ಅವಳು) ವಾಸಿಯಾಗಲಿಲ್ಲ"**

ಸುಧಾರಣೆ (REFORMATION) ಯು ಮಾನಸಾಂತರ ಹೊಂದುವದಕ್ಕೆ ಒಂದು ಅವಕಾಶವಾಗಿತ್ತು, ಏಕೆಂದರೆ, ದೇವರ ವಾಕ್ಯದಿಂದ ಸತ್ಯಗಳು ವ್ಯಕ್ತವಾಗಲು ಮತ್ತು ಪ್ರಕಟವಾಗಲು ಆರಂಭವಾದವು !

ನಿಜಾಂಶವೇನೆಂದರೆ, ಬಾಬೆಲ್ ಮಾನಸಾಂತರ ಹೊಂದುವದಕ್ಕೆ ದೇವರು ಸುಧಾರಣೆಯ ಎರಡೂ ಕಡೆಗಳಲ್ಲಿ 360 ವರ್ಷಗಳ ಕಾಲಾವಧಿಯನ್ನು ನೀಡಿದ್ದನು.

ಹೌದು ! ಸುಧಾರಣೆಗೆ ಮುಂಚೆ ಇದ್ದ 360 ವರ್ಷಗಳ ಕಾಲಾವಧಿಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಸೂಚಿಸುರುವದನ್ನು ನೋಡುತ್ತೇವೆ –

**ಪ್ರಕಟನೆ 2:21** - **"ಅವಳು ಮಾಡಿದ ಜಾರತ್ವಕ್ಕಾಗಿ ಮಾನಸಾಂತರ ಪಡುವದಕ್ಕೆ ನಾನು ಅವಳಿಗೆ ಸಮಯವನ್ನು ಕೊಟ್ಟೆನು; ಆದರೆ ಅವಳು ಮಾನಸಾಂತರಪಡಲಿಲ್ಲ".**

ಹೌದು! ಇಲ್ಲಿ "ಎಜಬೇಲ್" ಎಂಬುದು ಬೇರೆ ಯಾರೂ ಅಲ್ಲ, ಅದು "ಬಾಬೆಲ್" ಅಥವಾ ಹೆಸರಿಗೆ ಮಾತ್ರ ಕ್ರೈಸ್ತರಿಗೆ ಸಾಂಕೇತಿಕವಾಗಿದೆ.

ಮತ್ತು ಕರ್ತನು ಅವರು ಮಾನಸಾಂತರ ಹೊಂದಲು ಕಾಲವನ್ನು ಗ್ರೀಕ್ ಭಾಷೆಯಲ್ಲಿ–

"**ಕ್ರೋನೋಸ್**" ಅಥವಾ "**ಕಾಲ**" ಎಂದು ಹೇಳಿದ್ದಾನೆ.

ಆದ್ದರಿಂದ, ಮಾನಸಾಂತರ ಹೊಂದುವದಕ್ಕೆ ಅನೇಕ ಅವಕಾಶಗಳು ಕೊಟ್ಟ ನಂತರ, ಕೊನೆಯದಾಗಿ ಕರ್ತನಾದ ಯೇಸುವಿನ ಮೂಲಕ ದೇವರ ನ್ಯಾಯತೀರ್ಪು ಉಂಟಾಯಿತು.

ಆತನು ನ್ಯಾಯತೀರ್ಪನ್ನು ಹೀಗೆ ಉಚ್ಚರಿಸಿದನೆಂದು ನಾವು ಓದುತ್ತೇವೆ –

**ಪ್ರಕಟನೆ** 18 : 2 - **"ಅವನು ಗಟ್ಟಿಯಾದ ಶಬ್ಧದಿಂದ ಕೂಗುತ್ತಾ - ಮಹಾ ಬಾಬೆಲ್ ಬಿದ್ದಳು, ಬಿದ್ದಳು.,** ................

ಇದೇ ರೀತಿ, ಕರ್ತನಾದ ಯೇಸು ಹೀಗೆ ಇಸ್ರಾಯೆಲ್ ದೇಶದ ಮೇಲೆ ನ್ಯಾಯತೀರ್ಪನ್ನು ತನ್ನ ಮೊದಲನೆಯ ಬರುವಿಕೆಯಲ್ಲಿ ನಿಡಿದನೆಂದು, ಕೆಳಗಿನ ವಾಕ್ಯದಲ್ಲಿ ನಾವು ಓದುತ್ತೇವೆ –

**ಮತ್ತಾಯ 28 : 38**

**" ಇಗೋ, ನಿಮ್ಮ ಮನೆಯು ನಿಮಗೆ ಹಾಳಾದದ್ದಾಗಿ ಬಿಡಲ್ಪಡುವದು".**

ಹೌದು ! ಬಾಬೆಲಿನ ಈ ನಿರಾಕರಣೆಗೆ "ಒಂದು ಕಾಲ" (ಅಥವಾ ಪ್ರವಾದನೆಯ ಕಾಲ) ವನ್ನು ತೆಗೆದುಕೊಂಡಿತು. ಇದು ಅಕ್ಟೋಬರ್ 31ನೇ ತಾರೀಖು ಕ್ರಿ.ಶ. 1517 ರಲ್ಲಿ ಆರಂಭವಾಯಿತು. ಇದು ಸುಧಾರಣೆಯ (ಪರಿಣಾಮದ) ಆರಂಭದ ನಂತರ ನಡೆಯಿತು.

ಆದ್ದರಿಂದ, "**ಸ್ವಲ್ಪಕಾಲ**" ಕಾಯಬೇಕಾಗಿದ್ದ ಲೆಕ್ಕದ ಆರಂಭದ ಹಂತವು ಸುಧಾರಣೆ ಆರಂಭಗೊಂಡು ಆರು ತಿಂಗಳ ನಂತರವಾಗಿದೆ – ಅದು ಯಾವಾಗೆಂದರೆ ಏಪ್ರಿಲ್ 1518.

ಆದ್ದರಿಂದ ನಿರಾಕರಿಸಲ್ಪಟ್ಟ ದಿನಾಂಕವನ್ನು ಈ ರೀತಿಯಾಗಿ ಲೆಕ್ಕಹಾಕಬಹುದು.

**ಏಪ್ರಿಲ್ 1518 + 360 → ಏಪ್ರಿಲ್ 1878**

("ಒಂದು ಕಾಲ – ಪ್ರವಾದನಯು ಒಂದು ವರುಷದ ಕಾಲ)

ಹೌದು ! ಏಪ್ರಿಲ್ 1878 ರಲ್ಲಿ ಕರ್ತನು ಆ ಕೊನೆಯ ನ್ಯಾಯತೀರ್ಪಿನ ವಾಕ್ಯಗಳಿಂದ ಬಾಬೆಲ್ ಅನ್ನು ನಿರಾಕರಿಸಿದನು !

**ಈ ದಿನಾಂಕದ ಲೆಕ್ಕವನ್ನು ಇನ್ನೊಂದು ರೀತಿಯಲ್ಲಿ ಇನ್ನೂ ಬೆಂಬಲಿಸುತ್ತದೆ !**

**ಇಸ್ರಾಯೇಲಿನ ನಿರಾಕರಣೆಯು ಬಾಬೆಲಿನ ನಿರಾಕರಣೆಗೆ ಸೂಚಿತವಾಗಿದೆ.**



ಹೌದು ! ಕರ್ತನು ಮೆಸ್ಸೀಯನಾಗಿ ಮೊದಲ ಬರುವಿಕೆಯಲ್ಲಿ ಬಂದು $3\frac{1}{2}$ ವರ್ಷಗಳ ನಂತರ, ಅಂದರೆ ತಾನು ಸಾಯುವುದಕ್ಕೆ ಕೆಲವು ದಿವಸಗಳ ಮುಂಚೆ ಇಸ್ರಾಯೇಲ್ ದೇಶದ ಮೇಲೆ ಆತನು ಆ ನ್ಯಾಯ ತೀರ್ಪಿನ ವಾಕ್ಯಗಳನ್ನು ನುಡಿದನು.

ನೆನಪಿಡಿರಿ, ಮೆಸ್ಸೀಯ ಅಥವಾ **"ಅಭಿಷಕ್ತ"**ನಾಗಿ ಕರ್ತನ ಮೊದಲನೆಯ ಬರುವಿಕೆಯಲ್ಲಿ ತನ್ನ ದೀಕ್ಷಾ ಸ್ನಾನದಲ್ಲಿ ಆರಂಭಗೊಂಡಿತೆಂದು ಕೆಳಗಿನ ಪ್ರವಾದನಾ ವಾಕ್ಯದಲ್ಲಿ ಓದುತ್ತೇವೆ –

**ದಾನಿಯೇಲನು** 9:25 - **"........ ಅಭಿಷಕ್ತನಾದ (ಮೆಸ್ಸೀಯನ) ಪ್ರಭುವಿನವರೆಗೂ ಏಳು ವಾರಗಳು ಕಳೆಯಬೇಕು".**

(**ಸಂಪೂರ್ಣ ವಿವರಗಳಿಗಾಗಿ ಅಭ್ಯಾಸ** # 28**ನ್ನು ನೋಡಿರಿ**)

ಅದೇ ರೀತಿ ಆತನ ಎರಡನೆಯ ಬರುವಿಕೆಯಲ್ಲಿ ಕರ್ತನು ಆತ್ಮೀಕ ಇಸ್ರಾಯೆಲ್‌ನ ಮನೆವಾರ್ತೆಯವರನ್ನು ಅಥವಾ "**ಬಾಬೆಲ್**"ಅನ್ನು

ನಿಖರವಾಗಿ $3\frac{1}{2}$ ವರ್ಷಗಳ ನಂತರ, ಅಂದರೆ ಆತನ ಎರಡನೆ ಬರುವಿಕೆಯ ದಿನಾಂಕವಾದ ಅಕ್ಟೋಬರ್ 1874 ನಂತರ ನಿರಾಕರಿಸಿದನು

**1874 ಅಕ್ಟೋಬರ್ (ಎರಡನೆ ಬರುವಿಕೆಯ ದಿನಾಂಕ)** **+** **3½ (ವರ್ಷಗಳು)** → **ಏಪ್ರಿಲ್ 1878**

**ಅಗೋ!! ನೋಡಿದಿರಾ!??**

ಬಾಬೆಲ್ ನ ನಿರಾಕರಣೆಯ ದಿನಾಂಕವನ್ನು ನಮಗೆ ತೋರಿಸಲು ನಿಖರವಾದ ಬೆಂಬಲವಾಗಿದೆ!

... ಮತ್ತು ಸುಧಾರನೆಯ(**Reformation**) ಆರಂಭದ

ಆರು ತಿಂಗಳ ನಂತರ .... ಏಪ್ರಿಲ್ 1518 ನ ಆರಂಭದ ದಿನಾಂಕದಲ್ಲಿ ಬರುವ ಎರಡನೆಯ ವಿಧವಾದ ಲೆಕ್ಕವೂ ಸಹ ಹೇಗೆ ಸರಿಯಾಗಿದೆ ಎಂದು ನಿರೂಪವಾಗುವದನ್ನು ನೀವು ಗಮನಿಸಿದ್ದೀರಾ??

ಇಲ್ಲಿ ನಾವು ಇನ್ನೊಂದು ಮುಖ್ಯವಾದ ವಿಚಾರವನ್ನು ಗಮನಿಸಬೇಕು!

ಕರ್ತನು ಇಸ್ರಾಯೇಲ್ಯರಿಗೆ ಕ್ರಿ.ಶ. 33ರಲ್ಲಿ ಕೊನೆಯ ನ್ಯಾಯ ತೀರ್ಪನ್ನು ಘೋಷಿಸಿದ ದಿನದಿಂದ ಕೊನೆಯ ನಾಶನ ಮತ್ತು ನ್ಯಾಯ ತೀರ್ಪು ನೆರವೇರುವವರೆಗು ಅಂದರೆ ಕ್ರಿ.ಶ.69–70 ವರೆಗು

**...ಒಂದು ಕಾಲಾವಧಿ ಇತ್ತು!**

**....ಅದೇ ರೀತಿ.... ಬಾಬೆಲ್ ಮತ್ತು ಅದರ ಕೊನೆಯ ನಾಶನವಿರುತ್ತದೆ!**

ಹೌದು ! ಬಾಬೆಲಿನ ಅಂತಿಮ ನಾಶನವನ್ನು ಕುರಿತು ನಾವು ಹೀಗೆ ಓದುತ್ತೇವೆ –

**ಪ್ರಕಟನೆ 18 : 21**

**"ಆಗ ಬಲಿಷ್ಠನಾದ ಒಬ್ಬ ದೂತನು ಬೀಸುವ ದೊಡ್ಡ ಕಲ್ಲಿನಂತಿರುವ ಒಂದು ಕಲ್ಲನ್ನು ಎತ್ತಿ ಸಮುದ್ರದೊಳಗೆ ಹಾಕಿ ಮಹಾ ಪಟ್ಟಣವಾದ ಆ ಬಾಬೆಲು ಹೀಗೆಯೇ ಬಲಾತ್ಕಾರದಿಂದ ಕೆಡವಲ್ಪಟ್ಟು ಇನ್ನೆಂದಿಗೂ ಕಾಣಿಸುವುದಿಲ್ಲ" ಇಲ್ಲಿ "ಬೀಸುವ ಕಲ್ಲು"**

**"ಬಾಬೆಲಿನ"** ಎರಡು ಭಾಗಗಳನ್ನು ಸೂಚಿಸುತ್ತದೆ –

**ರೋಮನ್ ಕಥೋಲಿಕ್** ಮತ್ತು **...........ಪ್ರಾಟೆಸ್ಟಂಟಿಸಮ್** !!

ಎರಡೂ ಸೇರಿ ಪೂರ್ತಿಯಾಗಿ ಮತ್ತು ಅಂತಿಮವಾಗಿ ನಾಶವಾಗುವದು !!!

ಅದರೆ, ಆ ನಾಶನವು ಬರುವದಕ್ಕೆ ಮುಂಚೆ, ದೇವರು ಒಂದು ಕರೆಯುವಿಕೆಯನ್ನು ನೀಡುತ್ತಾನೆ !!



ಹೌದು ! ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ.

**ಯೆರೆಮೀಯ 51:9**

**"ನಾವು ಬಾಬೆಲನ್ನು ವಾಸಿಮಾಡುವದಕ್ಕಿದ್ದೆವು. ಆದರೆ ಅದು ವಾಸಿಯಾಗಲಿಲ್ಲ; ಅದನ್ನು ಬಿಡು, ನಮ್ಮ ಸ್ವಂತ ದೇಶಗಳಿಗೆ ಹೋಗೋಣ .........."**

ಹೌದು ! ಇದು ಬಾಬೆಲನ್ನು ಬಿಟ್ಟು ಬರುವುದಕ್ಕಾಗಿ ಇರುವ ದೇವರ ಕರೆಯಾಗಿದೆ ! ಇದನ್ನೆ ಮತ್ತೆ ನಾವು ಹೀಗೆ ಓದುತ್ತೇವೆ –

**ಯೆರೆಮೀಯ 51:6**

**"ಬಾಬೆಲಿನೊಳಗಿಂದ ಓಡಿಹೋಗಿರಿ, ಒಬ್ಬೊಬ್ಬನು ತನ್ನ ಪ್ರಾಣವನ್ನು ತಪ್ಪಿಸಿಕೊಳ್ಳಲಿ; ಅದರ ಅಕ್ರಮದಲ್ಲಿ ನಾಶವಾಗಬೇಡಿರಿ..........".**

ಹೌದು ! ಕೊನೆಯದಾಗಿ ಹೊಸ ಒಡಂಬಡಿಕೆಯಲ್ಲಿ ವ್ಯಕ್ತಿಗತವಾಗಿ ದೇವರು ಕರೆಯುವುದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 18:4**

**"ಪರಲೋಕದಿಂದ ಮತ್ತೊಂದು ಶಬ್ದವನ್ನು ನಾನು ಕೇಳಿದೆನು; ಅದು - ನನ್ನ ಜನರೇ, ಅವಳಿಂದ ಹೊರಗೆ ಬನ್ನಿರಿ ; ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಬಾರದು;....."**

**ಹೌದು! ...............ಯಾರು ಈ "ನನ್ನ ಜನರೆ"?**



ಆದರೆ ಅವರು ನಂಬಿಗಸ್ತರಾದ ಕೆಲವರಾಗಿದ್ದು ಪ್ರಾಮಾಣಿಕವಾಗಿ ಕರ್ತನನ್ನು ಮತ್ತು ಆತನ ಸತ್ಯವಾಕ್ಯವನ್ನು ವ್ಯವಸ್ಥೆಗಳ ವ್ಯವಸ್ಥೆಯಾಗಿರುವ "ಬಾಬೆಲಿ"ನ ಮಧ್ಯದಲ್ಲಿ ಹುಡುಕುವವರಾಗಿದ್ದಾರೆ !.

ಹೌದು ! ಅವರು ಯಾರೆಂದರೆ ರೋಮನ್ ಕಥೋಲಿಕ್ ಮತ್ತು ಪ್ರಾಟೆಸ್ಟಂಟ್ಸ್ ಎರಡರಲ್ಲೂ ಸೇರಿದವರಾಗಿದ್ದಾರೆ !!

**...... ಮತ್ತು ಈ ಕರೆಯು 1878 ರಿಂದ ನಡೆಯುತ್ತಾ ಇದೆ !!**

**"ನನ್ನ ಜನರೆ" ಎಂದು ದೇವರು ಇಲ್ಲಿ ಸೂಚಿಸಿರುವ ತರಗತಿಯಲ್ಲಿ (ವರ್ಗದಲ್ಲಿ) ನೀವು ಇದ್ದೀರಾ?**

**ಇಂದು ದೇವರು ನಿಮ್ಮೊಂದಿಗೆ ಮಾತನಾಡುತ್ತಿದ್ದಾರಾ?**

**ಹಾಗಿದ್ದರೆ ಈ ಕರೆಯನ್ನು ನಿಮ್ಮ "ಕಿವಿಗಳು" ಕೇಳುವವು !!**

**ಏಕೆಂದರೆ ......ಈ ಕರೆಯು ನಿಮಗಾಗಿ ವ್ಯಕ್ತಿಗತವಾಗಿ ಮತ್ತು ಪ್ರತ್ಯೇಕವಾಗಿದೆ !!**

ಈಗ ನೀವು ಕ್ರಿಯೆಯಲ್ಲಿ ಮತ್ತು ಬಹು ಬೇಗನೆ ಚಲಿಸಬೇಕೆಂದು ಕರ್ತನ ಪ್ರವಾದನಾ ವಾಕ್ಯದಲ್ಲಿ ಓದುತ್ತೇವೆ.

## ಮತ್ತಾಯ 24 : 15

"ಆದುದರಿಂದ ಪ್ರವಾದಿಯಾದ ದಾನಿಯೇಲನಿಂದ ಹೇಳಲ್ಪಟ್ಟ ಹಾಳು ಮಾಡುವ ಅಸಹ್ಯವು ಪರಿಶುದ್ಧ ಸ್ಥಳದಲ್ಲಿ ನಿಂತಿರುವದನ್ನು ನೀವು ನೋಡುವಾಗ (ಓದುವವನು ಗ್ರಹಿಸಲಿ)"

**ಇಲ್ಲಿ "ನೀವು" ಎಂದರೆ "(ye)"..... - ನೀವು !!**



ಇದನ್ನು ನಿಮ್ಮ ಶಾರೀರಿಕ (ಸ್ವಾಭಾವಿಕ) ಕಣ್ಣುಗಳಿಂದ "**ನೋಡು**"ವುದಲ್ಲ.

ಆದರೆ ನಿಮ್ಮ (**ತಿಳುವಳಿಕೆಯ ಕಣ್ಣುಗಳಿಂದ**) ನೋಡಬೇಕಾಗಿದೆ

(ಎಫೆಸದವರಿಗೆ 1 : 18 – ತಮಿಳಿನಲ್ಲಿ ವಾಕ್ಯ – 19)

**ನೀವು ಈ "ಹಾಳುಮಾಡುವ ಅಸಹ್ಯವು ಪರಿಶುದ್ಧ ಸ್ಥಳದಲ್ಲಿ ನಿಂತಿರುವದನ್ನು" ನೋಡಿದ್ದೀರಾ" ಮತ್ತು ಗುರುತಿಸಿದ್ದೀರಾ? ?**

**ಹೌದು ! ಇದು ಕ್ರಿಸ್ತವಿರೋಧಿಯ ವ್ಯವಸ್ಥೆಯಾಗಿದೆ !**

**ಇದು "ಬಾಬೆಲ್" ಆಗಿದೆ !**

## ರೋಮನ್ ಕಥೋಲಿಕ್ ಮತ್ತು ಪ್ರಾಟೆಸ್ಟಂಟ್ ಸಭೆಗಳು ಎರಡೂ ಸೇರಿ ......

## ಈ "ಬಾಬೆಲ್" ಆಗಿದೆ.

**ಈಗ ಇದನ್ನು ಕುರಿತು ನೋಡಿ ಮತ್ತು ಅರ್ಥಮಾಡಿಕಂಡಮೇಲೆ .... ಮುಂದೇನು ಮಾಡಬೇಕಾಗಿದೆ??**

ಈಗ ನಾವು ಅದರ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

ಮತ್ತಾಯ 24:16

"ಯೂದಾಯದಲ್ಲಿದ್ದವರು ಬೆಟ್ಟಗಳಿಗೆ ಓಡಿ ಹೋಗಲಿ"

**ಇದರ ಅರ್ಥವೇನು?**

ಇಲ್ಲಿ ಹೇಳಿರುವ "**ಯೂದಾಯ**" ವೆಂಬುದು ಅರ್ಥಗತ (ನೇರವಾದ) ಯೂದಾಯ ಸ್ಥಳವಲ್ಲ – ಏಕೆಂದರೆ ಸ್ವತ: ಯೂದಾಯವು ಬೆಟ್ಟ ಅಥವಾ ಗುಡ್ಡಗಳಿರುವ ದೇಶವಾಗಿದೆ !!

**ಒಂದು ಬೆಟ್ಟದಿಂದ ಇನ್ನೊಂದು ಬೆಟ್ಟಕ್ಕೆ ಓಡಿಹೋಗುವುದರ ಅರ್ಥ ಏನಾಗಿರಬಹುದು???**

ಇಲ್ಲ ! ಅದು ಅರ್ಥಹೀನವಾಗಿದೆ (ಅರ್ಥವಿಲ್ಲದಾಗಿದೆ) !!

ಇಲ್ಲಿ "**ಯೂದಾಯ**" ಎಂದರೆ ಹೆಸರಿಗೆ ಮಾತ್ರ ಕ್ರೈಸ್ತರು ಅಥವಾ "**ಬಾಬೆಲಿ**"ಗೆ ಸಂಕೇತವಾಗಿದೆ.

**ಇಲ್ಲಿ ಸೂಚನೆ ನೀಡಿರುವದು ಬಹಳ ಸ್ಪಷ್ಟವಾಗಿದೆ -**
"....... ಬೆಟ್ಟಗಳಿಗೆ ಓಡಿಹೋಗಲಿ"

**ಇದು ಏನನ್ನು ಸೂಚಿಸುತ್ತದೆ?**

ಇಲ್ಲಿ "ಬೆಟ್ಟಗಳು" ಎಂಬ ಪದವು ನಿಜವಾಗಿಯು ಏಕವಚನವಾಗಿರಬೇಕು.

ಹೌದು ! ಒಂದು ಬೆಟ್ಟ !

"...... ಬೆಟ್ಟಗಳಿಗೆ ಓಡಿಹೋಗಲಿ"

ಚೆನ್ನಾಗಿ ತಿಳಿದಿರುವಂತೆ "ಬೆಟ್ಟ": ಎಂದರೆ ಸಾಂಕೇತಿಕ ಭಾಷೆಯಾಗಿದ್ದು ಅದರ ಅರ್ಥ ಏನೆಂದರೆ

**ಒಂದು ರಾಜ್ಯ !**

ಯಾವ ರಾಜ್ಯಕ್ಕೆ ಓಡಿಹೋಗಲು ಸೂಚನೆ ನೀಡಲಾಗಿದೆ !!

ಆಹ್ ! ಅದಕ್ಕೆ ಉತ್ತರವನ್ನು ನಾವು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಕೊಲೊಸ್ಸೆಯವರಿಗೆ 1:13**

**“ಆತನು (ದೇವರು) ನಮ್ಮನ್ನು ಅಂಧಕಾರದ ಶಕ್ತಿಯಿಂದ ಬಿಡಿಸಿ ತನ್ನ ಪ್ರಿಯಕುಮಾರನ ರಾಜ್ಯದೊಳಗೆ ಸೇರಿಸಿದನು”.**

ಹೌದು ! ಓಡಬೇಕಾದ ಬೆಟ್ಟವು ಅಲ್ಲಿದೆ !

**ಅದು ಕ್ರಿಸ್ತನ ರಾಜ್ಯ**

ಹೌದು ! ಕ್ರೈಸ್ತತ್ವವು “ಆತ್ಮ” ಮತ್ತು “ಸತ್ಯ” ಎರಡರಲ್ಲೂ ಇರುವದಾಗಿದೆ.

**ಕರ್ತನ ಸಲಹೆ ಏನೆಂದರೆ -**

**.................... ತಪ್ಪಾದ ಮತ್ತು ಸುಳ್ಳು ಬೋಧನೆಗಳ ವ್ಯವಸ್ಥೆಗಳಿಂದ ತಪ್ಪಿಸಿಕೊಂಡು ಓಡಿಹೋಗಿರಿ !**

ನಂತರ ಕರ್ತನು ಕೆಲವು ಬಹಳ ಮುಖ್ಯವಾದ ಪ್ರವಾದನಾ ಎಚ್ಚರಿಕೆಗಳನ್ನು ನೀಡುತ್ತಾನೆ !

ಈಗ ನಾವು ಅವುಗಳನ್ನು ಒಂದೊಂದಾಗಿ ಅರ್ಥಮಾಡಿಕೊಳ್ಳೋಣ ..........

## ಎಚ್ಚರಿಕೆ # 1

**ಮತ್ತಾಯ 24:17** - **“ಮಾಳಿಗೆಯ ಮೇಲಿರುವವನು ತನ್ನ ಮನೆಯೊಳಗಿಂದ ಏನಾದರೂ ತಕ್ಕೊಳ್ಳುವದಕ್ಕಾಗಿ ಕೆಳಗೆ ಇಳಿಯದಿರಲಿ”.**

**ಇದಕ್ಕೆ ಅರ್ಥವೇನು?**


ಮೊದಲನೆಯದಾಗಿ ಇಲ್ಲಿ ಸೂಚಿಸಿರುವ ಮನೆಯನ್ನು

"ತನ್ನ ಮನೆ"

ಎಂದು ಹೇಳಿರುವುದನ್ನು ಗಮನಿಸೋಣ.



ಇದು ಹೆಸರಿಗೆ ಮಾತ್ರ ಕ್ರೈಸ್ತತ್ವದಲ್ಲಿ (Nominal Christianity) ಇರುವ ವಿವಿಧ “ನಂಬಿಕೆಯ ಮನೆ (ವಾರ್ತೆ)ಗಳನ್ನು ಸೂಚಿಸುತ್ತದೆ.



**ಪ್ರತ್ಯೇಕ ಸಭೆಗಳು ಮತ್ತು ಪಂಗಡಗಳು.**

ಇದು ವಿವಿಧ ಸಭೆಗಳಲ್ಲಿರುವ ಸದಸ್ಯರನ್ನು ಸೂಚಿಸುತ್ತದೆ.

ಈಗ ನಾವು ಈ ಸಂಕೇತಗಳ ಅರ್ಥ ಏನೆಂಬುದನ್ನು ನೋಡೋಣ...............

**"ಮಾಳಿಗೆಯ ಮೇಲಿರುವವನು......"**

ಇದು ಒಂದೇ ಸಭೆಯ ಅಥವಾ **"ಮನೆಯ"** ಬೇರೆ ಸದಸ್ಯರನ್ನು ಹೋಲಿಸುವಾಗ ಇವರಿಗೆ ಕರ್ತನೊಂದಿಗಿರುವ ಉನ್ನತ ಮಟ್ಟದ ನಂಬಿಕೆ ಮತ್ತು ತಿಳುವಳಿಕೆ ಮತ್ತು ಇವರ ಜೀವನವನ್ನು ಸೂಚಿಸುತ್ತದೆ.

ನಂತರ ನಾವು ಏನು ಓದುತ್ತೇವೆ......

**"........... ಕೆಳಗೆ ಇಳಿಯದಿರಲಿ"**

ಇದು ಕೆಳಮಟ್ಟದ ನಂಬಿಕೆ ಅಥವಾ ತಿಳುವಳಿಕೆಗೆ **"ಇಳಿದು"** ಬರುವದನ್ನು ಸೂಚಿಸುತ್ತದೆ

ಹೌದು! ಇದು ಅದೇ ಸಭೆ ಅಥವಾ ಪಂಗಡದವರ ಸದಸ್ಯರೊಂದಿಗೆ ಅವರಲ್ಲಿರುವ ಕೆಳಮಟ್ಟದ ನಂಬಿಕೆ ಮತ್ತು ತಿಳುವಳಿಕೆಯ ವಿಚಾರದಲ್ಲಿ ವಾಗ್ವಾದ ಮಾಡುವದಕ್ಕೆ ಮಾಡುವ ಪ್ರಯತ್ನ ಅಥವಾ ಪ್ರಯಾಸವನ್ನು ಸೂಚಿಸುತ್ತದೆ.

....... ಬಹುಶ: ಬೋಧಕರು ಅಥವಾ ಪಾದ್ರಿಗಳು ಅಥವಾ ಇತರ ಸಹ–ಸದಸ್ಯರೊಂದಿಗೆ ಇರಬಹುದು.

**ಇಲ್ಲಿ ಕೆಳಗೆ "ಇಳಿಯು"ವದು ಎಂದರೇನು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡೋಣ –

**".......ತನ್ನ ಮನೆಯೊಳಗಿಂದ ಏನಾದರೂ ತಕ್ಕೊಳ್ಳುವದಕ್ಕಾಗಿ......"**

ಇಲ್ಲಿ **"ಏನಾದರು"** ಎಂಬುದು ಕೆಳಗೆ **"ಇಳಿಯುವದಕ್ಕೆ"** ಉದ್ದೇಶವಾಗಿದೆ !

ಹೌದು ! ಇದು ಸತ್ಯಕ್ಕಾಗಿ ಬೇರೆಯವರಿಂದ ಮಂಜೂರಾತಿ (ಅನುಮತಿ) ಮತ್ತು ಒಪ್ಪಂದವನ್ನು ಮಾಡುವದಕ್ಕೆ ಹುಡುಕುವದನ್ನು ಸೂಚಿಸುತ್ತದೆ –

ಮತ್ತು ಯಾರೊಂದಿಗೆ ಎಂದರೆ, ಅವರು ಸತ್ಯವನ್ನು ಸಹ ನೋಡಲಾರರು ಏಕೆಂದರೆ ಅವರ "ಮನೋನೇತ್ರಗಳು" ತೆರೆದಿಲ್ಲ!

**ಇದರಿಂದ ಕೇವಲ ವಾಗ್ವಾದಗಳು ಮಾತ್ರ ಉಂಟಾಗುತ್ತದೆ !**

ಅನೇಕರು ಹೀಗೆ ಮಾಡಲು ಪ್ರಯತ್ನಿಸುತ್ತಾರೆ !

ಕರ್ತನೇ ಬಲ್ಲ !! ಆದರೆ ಈ ಪ್ರಯತ್ನಗಳೆಲ್ಲವೂ ವ್ಯರ್ಥ !

ಸ್ವತ: ಯೇಸುವಿನ ದಿನದಿಂದಲೇ, ಯಾವ ಅಧಿಕಾರಿಗಳು ಅಥವಾ ಫರಿಸಾಯರು ಅಥವಾ ಯೆಹೂದ್ಯ ಬೋಧಕರೇ ಆಗಲಿ ಕರ್ತನ ವಾಕ್ಯಗಳನ್ನು ನಂಬಲಿಲ್ಲ ಎಂದು ಕೆಳಗಿನ ವಾಕ್ಯದಲ್ಲಿ ಬಹಳ ಸ್ಪಷ್ಟವಾಗಿ ಓದುತ್ತೇವೆ –



**ಯೋಹಾನ 7:48 – "ಅಧಿಕಾರಿಗಳಲ್ಲಿಯೂ ಫರಿಸಾಯರಲ್ಲಿಯೂ ಯಾರಾದರೂ ಅವನ ಮೇಲೆ ವಿಶ್ವಾಸವಿಟ್ಟಿದ್ದಾರೋ?"**

ಹೌದು ! ಈಗಿನ ಸಭೆಗಳ ಅಧಿಕಾರಿಗಳಲ್ಲಿ ಇದೇ ಸ್ಥಿತಿ ಇದೆಯಲ್ಲವೆ??

ಹೌದು ! ಯಾವಾಗಲೂ ಸತ್ಯವು ವಿರೋಧಿಸಲ್ಪಡುತ್ತದೆ ಎಂದು ಆದಿಸಭೆಯ ಸ್ಥಿತಿಯನ್ನು ಕುರಿತು ಓದುವಾಗ ತಿಳಿದುಬರುತ್ತದೆ –

**ಅಪೋಸ್ತಲರ ಕೃತ್ಯಗಳು 28 : 22**

**"ಆದರೆ ನಿನ್ನ ಅಭಿಪ್ರಾಯವೇನೆಂದು ನಿನ್ನಿಂದಲೇ ಕೇಳುವದಕ್ಕೆ ನಾವು ಅಪೇಕ್ಷಿಸುತ್ತೇವೆ; ಎಲ್ಲಾ ಕಡೆಯಲ್ಲಿಯೂ ಈ ಪಂಗಡದ ವಿಷಯದಲ್ಲಿ ಜನರು ವಿರುದ್ಧವಾಗಿ ಮಾತನಾಡುತ್ತಾರೆಂಬುದು ನಮಗೆ ಗೊತ್ತಿದೆ.....".**

ಹೌದು ! ಈ ಪ್ರತಿಕ್ರಿಯೆಯು ನಮ್ಮ ಈ ದಿನ ಮತ್ತು ಸಮಯದವರೆಗೂ ಬದಲಾಗದೆ ಹಾಗೆಯೇ ಇದೆ !

ಈಗ ನಾವು ಮುಂದಿನ ಎಚ್ಚರಿಕೆಯನ್ನು ಕುರಿತು ನೋಡೋಣ –

## ಎಚ್ಚರಿಕೆ # 2

**ಮತ್ತಾಯ** 24:18 – **"ಇಲ್ಲದೆ ಹೊಲದಲ್ಲಿರುವವನು ತನ್ನ ಬಟ್ಟೆಗಳನ್ನು ತಕ್ಕೊಳ್ಳುವದಕ್ಕಾಗಿ ಹಿಂತಿರುಗದೆ ಇರಲಿ"**

**ಇದರ ಅರ್ಥವೇನು?**

ಇಲ್ಲಿ "ಹೊಲವು" ಒಂದು ಸಂಕೇತವಾಗಿದ್ದು ಅದರ ಅರ್ಥವನ್ನು ಕುರಿತು ಹೀಗೆ ಓದುತ್ತೇವೆ.

**ಮತ್ತಾಯ** 13:38 - **"ಹೊಲವು ಈ ಲೋಕ"**

ಹೌದು ! ಇದು ಒಂದು ವರ್ಗ ಅಥವಾ ತರಗತಿಯನ್ನು ಸೂಚಿಸುತ್ತಿದ್ದು– .......... ಸಭೆಯ ಸದಸ್ಯರಲ್ಲದವರಾಗಿದ್ದಾರೆ.

ಮತ್ತು, ..... ಕ್ರೈಸ್ತರೂ ಸಹ ಅಲ್ಲ, ಆದರೂ ಸತ್ಯವನ್ನು "ಕೇಳು" ವವರಾಗಿದ್ದಾರೆ !!

ಈಗ ನಾವು ಕರ್ತನ ಎಚ್ಚರಿಕೆಯ ವಾಕ್ಯಗಳನ್ನು ಅರ್ಥಮಾಡಿಕೊಳ್ಳಲು, ಈ ಸಂಕೇತಗಳನ್ನು ಅರ್ಥಮಾಡಿಕೊಳ್ಳೋಣ !

**"ಹಿಂತಿರುಗದೆ ಇರಲಿ"**

ಇದು ದೇವರ ವಾಕ್ಯ – ಸತ್ಯವೇದದಲ್ಲಿನ ಸತ್ಯವಾಕ್ಯಗಳನ್ನು "ಕೇಳಿದ" **ನಂತರ** ಪ್ರತಿಕ್ರಿಯೆ ಮಾಡುವ ವರ್ಗವನ್ನು ಸೂಚಿಸುತ್ತದೆ !

**ಅವರು ಏನು ಮಾಡುತ್ತಾರೆ** ? ನಾವು ಮುಂದೆ ಓದಿ ನೋಡೋಣ.

**" ತನ್ನ ಬಟ್ಟೆಗಳನ್ನು ತಕ್ಕೊಳ್ಳವುದಕ್ಕಾಗಿ"**

ನಮಗೆ ಗೊತ್ತಿರುವ ಹಾಗೆ "ಬಟ್ಟೆಗಳು" ಎಂದರೆ ಹೊದಿಕೆಗೆ ಅಥವಾ ಮರೆ ಮಾಡುವುದಕ್ಕೆ ಉದಾಹರಣೆಯಾಗಿದೆ ಎಂದು ನೋಡುತ್ತೇವೆ. ನಮ್ಮ ಪಾಪಗಳನ್ನು ಮರೆ ಮಾಡುವುದಕ್ಕೆ ಕರ್ತನು ಸುರಿಸಿದಂತಹ ರಕ್ತದಿಂದ

➡ ಆತನ “ನೀತಿಯ ನಿಲುವಂಗಿ”ಯಾಗಿ ನಮಗೆ ದೊರೆಯಿತ್ತೆಂದು ನಾವು ಓದುತ್ತೇವೆ (ಯೆಶಾಯ 61:10)

ಇಲ್ಲಿ “ಬಟ್ಟೆ”ಗಳು ಎಂದರೆ ಅರ್ಥವೇನು?

ಇಲ್ಲಿ “ಬಟ್ಟೆ”ಗಳು ಅಥವಾ ಹೊದಿಕೆಯು ಸಾಂಪ್ರದಾಯಕ ಮತ್ತು ಆರ್ಥೋಡಾಕ್ಸ್ ನಾಮಾಂಕಿತ ಸಭೆಗಳು “ಕ್ರೈಸ್ತರು” ಎಂದು ಸದಸ್ಯರಾಗುವುದರ ಮೂಲಕ ಮನುಷ್ಯನ ಅನುಮತಿ ಅಥವಾ ಗುರುತಿಸಲ್ಪಟಡುವುದಕ್ಕಾಗಿ ಹುಡುಕುವುದು ಅಥವಾ ಎದುರು ನೋಡುವುದನ್ನು ಸೂಚಿಸುತ್ತದೆ.

**ಹೌದು! ಕರ್ತನು ಬಲವಾಗಿ ಎಚ್ಚರಿಸುವುದು ಏನೆಂದರೆ ಸಭೆಯ ಸದಸ್ಯರಾಗುವುದರ ಮೂಲಕ “ಹೊದಿಕೆ” ಯಾವುದಕ್ಕೆ ಹುಡುಕಬಾರದು, ಅದಕ್ಕೆ ಬದಲಾಗಿ ಸತ್ಯದಲ್ಲಿ ಬೆಳೆದು ಪ್ರಗತಿ ಹೊಂದಬೇಕು.**

**... ದೇವರ ವಾಕ್ಯದಿಂದ ಮಾರ್ಗದರ್ಶನ ಹೊಂದಿ, ಆತನಲ್ಲಿ ವಿಶ್ವಾಸವಿಟ್ಟು ಆತನಲ್ಲಿ ಮಾತ್ರ ವಿಶ್ವಾಸವಿಡಬೇಕು ಮತ್ತು ಮನುಷ್ಯನ ಅಥವಾ ಆತನು ನಿರ್ಮಿಸಿದ ಸಂಸ್ಥೆಗಳಲ್ಲಿ ಅಲ್ಲ !**

ಈಗ ನಾವು ಮುಂದೆ ನೋಡೋಣ

## ಎಚ್ಚರಿಕೆ # 3

**ಮತ್ತಾಯ** 24:19 - **“ಆ ದಿವಸಗಳಲ್ಲಿ ಗರ್ಭಿಣಿಯರಿಗೂ ಮೊಲೆ ಕುಡಿಸುವ ಕೂಸುಗಳಿದ್ದವರಿಗೂ ಅಯ್ಯೋ ?”)**

**ಇದರ ಅರ್ಥವೇನು ?**

ಇಲ್ಲಿ **“ಕೂಸು”** ಎಂದರೆ ಸ್ವಾಭಾವಿಕವಾದ **“ಮಗುವನ್ನು”** ಸೂಚಿಸದೆ –

➡ ...ಆತ್ಮೀಕ ಮಕ್ಕಳು ಅಥವಾ ಆತ್ಮೀಕವಾಗಿ ಮಗು ಹುಟ್ಟುವುದನ್ನು ಸೂಚಿಸುತ್ತದೆ.

ಅದೇ ರೀತಿ **“ಮೊಲೆ ಕುಡಿಸುವುದು”** ಎಂದರೆ ಸ್ವಾಭಾವಿಕ ಹಾಲನ್ನು ಮತ್ತು ಸ್ವಾಭಾವಿಕ ಮಕ್ಕಳಿಗೆ ಹಾಲು ಕುಡಿಸುವುದನ್ನು ಸೂಚಿಸದೆ **“ಆತ್ಮೀಕ ಹಾಲು”** ಕುಡಿಸುವುದನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

1 **ಪೇತ್ರನು** 2:2 - “ **ಹೊಸದಾಗಿ ಹುಟ್ಟಿದ ಶಿಶುಗಳಂತಿರುವ ನೀವು ಬೆಳೆಯುವ ಹಾಗೆ ವಾಕ್ಯವೆಂಬ ಶುದ್ಧ ಹಾಲನ್ನು ಬಯಸಿರಿ”**

ಹೌದು! ಇದು **“ಆತ್ಮೀಕ ತಾಯಿಯಂದಿರ”** ವರ್ಗದವರಿಗೆ ಕರ್ತನ ಎಚ್ಚರಿಕೆಯ ವಾಕ್ಯಗಳೆಂದು ಅಪೋಸ್ತಲನಾದ ಪೌಲನು ಹೇಳುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಗಲಾತ್ಯದವರಿಗೆ** 4:19 – “ **ನನ್ನ ಚಿಕ್ಕ ಮಕ್ಕಳೇ, ಕ್ರಿಸ್ತನ ಸಾರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ ನಿಮಗೋಸ್ಕರ ತಿರಿಗಿ ಪ್ರಸವವೇದನೆ ಪಡುತ್ತೇನೆ”**

**ಹೌದು! ಇವರು ಬೋಧಕರು, ಉಪದೇಶಕರು ಮತ್ತು ಶಿಕ್ಷಕರ ವರ್ಗದವರಾಗಿದ್ದಾರೆ**

ಈಗ ನಾವು ಕರ್ತನು ಅವರಿಗೆ ಏನು ಹೇಳುತ್ತಿದ್ದಾನೆಂದು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ.

**“ಗರ್ಭಿಣಿಯರಿಗೂ ಮೊಲೆ ಕುಡಿಸುವ ಕೂಸುಗಳಿದ್ದವರಿಗೂ ಅಯ್ಯೋ”**

ಕರ್ತನು ಅವರಿಗೆ **“ಅಯ್ಯೋ”** ಎಂದು ಹೇಳುವುದನ್ನು **ಗಮನಿಸಿರಿ!**

**ಹೀಗೇಕೆ?**

ಏಕೆಂದರೆ ಈ "ಮಕ್ಕಳು" ಅಥವಾ ಸಭೆಯವರು – ಸತ್ಯವೆಂಬ ನಿಜವಾದ **“ಹಾಲಿನಿಂದ”** ಪೋಷಣೆಯನ್ನು ಹೊಂದಿಲ್ಲ!



ಆದ್ದರಿಂದ ಈ ಬೋಧಕರು, ಉಪದೇಶಕರು ಮತ್ತು ಶಿಕ್ಷಕರು ಸತ್ಯವಾಕ್ಯಗಳನ್ನು ಕೇಳಿದ ನಂತರ, ಅವರ ಮಕ್ಕಳಿಗೆ ತಾವು ತಪ್ಪಾದ ಸುಳ್ಳು ಬೋಧನೆ ಮತ್ತು ಅಸತ್ಯವೆಂಬ ಹಾಲನ್ನು ಪೋಷಿಸಿದರು ಎಂದು ಒಪ್ಪಿಕೊಳ್ಳಬೇಕು ಮತ್ತು ಇದರಿಂದಾಗಿ

- ......"ಮಂದೆ"ಗಳ ನಡುವೆ ಮಹಾ ಗಲಭೆಗಳುಂಟಾಗಿ ಅವರ ಮಂದೆಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ

- .......ಮತ್ತು ಸಭಿಕರಿಂದ ಬರುವ ಕಾಣಿಕೆ ಮತ್ತು ದಶಮಭಾಗವನ್ನು ನಂಬಿದ್ದರಿಂದ ಅವರ ಬದುಕನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ.

## ಹೌದು! ಇದು ಕಷ್ಟ.. ಆದರೆ ಅಸಾಧ್ಯವಲ್ಲ !!!

ಈ ಮೊದಲು ಮೂರು "**ಎಚ್ಚರಿಕೆಗಳು**" ಕೊಯ್ಲಿನ ಮೂರು ವರ್ಗದವರನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ

**ಲೂಕ 17:34-36**

**"ಆ ರಾತ್ರಿಯಲ್ಲಿ ಇಬ್ಬರು ಒಂದೇ ಹಾಸಿಗೆಯಲ್ಲಿ ಇರುವರು, ಒಬ್ಬನು ತೆಗೆಯಲ್ಪಡುವನು; ಮತ್ತೊಬ್ಬನು ಬಿಡಲ್ಪಡುವನು ಇಬ್ಬರು ಹೆಂಗಸರು ಜೊತೆಯಾಗಿ ಬೀಸುತ್ತಿರುವರು; ಒಬ್ಬಳು ತೆಗೆಯಲ್ಪಡುವಳು, ಮತ್ತೊಬ್ಬಳು ಬಿಡಲ್ಪಡುವಳು ಇಬ್ಬರು ಹೊಲದಲ್ಲಿರುವರು; ಒಬ್ಬನು ತೆಗೆಯಲ್ಪಡುವನು, ಮತ್ತೊಬ್ಬನು ಬಿಡಲ್ಪಡುವನು ಎಂದು ನಾನು ನಿಮಗೆ ಹೇಳುತ್ತೇನೆ ಅಂದನು"**

ಹೌದು! ನಾವು ಈ ಮೂರು ವರ್ಗದವರನ್ನು ಕುರಿತು ಹೀಗೆ ನೋಡುತ್ತೇವೆ.

- "**ಹಾಸಿಗೆಯ**" ವರ್ಗದವರು – ಇದು ಕ್ರೈಸ್ತರು ವಿವಿಧ ಸಭೆಗಳ ಮತ್ತು ಪಂಗಡಗಳ ಸದಸ್ಯರಾಗಿರುವುದನ್ನು ಸೂಚಿಸುತ್ತದೆ.

ಇವರು ಕ್ರೈಸ್ತರಾಗಿದ್ದು ವಿವಿಧ ಸಭೆಗಳ ಮತ್ತು ಪಂಗಡಗಳ ಸದಸ್ಯರಾಗಿದ್ದಾರೆ.

- "**ಬೀಸುತ್ತಿರುವ**" ವರ್ಗದವರು – ಇದು ಆತ್ಮೀಕ ಆಹಾರಗಳನ್ನು ಸಿದ್ಧಪಡಿಸುವವರು ಮತ್ತು ಉಪಚರಿಸುವವರಾಗಿದ್ದಾರೆ ಬೋಧಕರು, ಪಾದ್ರಿಗಳು, ಉಪದೇಶಕರು, ಶಿಕ್ಷಕರು ಇತರೆ

"**ಹೊಲದ**" ವರ್ಗದವರು

ಇವರು ಕ್ರೈಸ್ತರಲ್ಲದವರಾಗಿದ್ದು,
ಕ್ರೈಸ್ತತ್ವದ ಹಿನ್ನೆಲೆಯೇ ತಿಳಿಯದವರಾಗಿದ್ದಾರೆ!!

ಆದ್ದರಿಂದ ಮೊದಲ **ಮೂರು** ಎಚ್ಚರಿಕೆಗಳು **ಅಂತಹ** ವರ್ಗದವರಿಗೆ ಸೂಚಿಸಲಾಗಿದೆ

ಆದರೆ, ನಾವು ನೋಡುವುದೇನೆಂದರೆ, ನಮ್ಮ ಕರ್ತನು ನಾಲ್ಕನೆಯ ಎಚ್ಚರಿಕೆ ನೀಡಿರುವುದನ್ನು ಮುಂದೆ ನೋಡುತ್ತೇವೆ

# ಎಚ್ಚರಿಕೆ # 4

**ಮತ್ತಾಯ** 24: 20 – " ಆದರೆ ನಿಮ್ಮ ಪಲಾಯನವು ಚಳಿಗಾಲದಲ್ಲಾಗಲಿ ಸಬ್ಬತ್ತಿನ ದಿನದಲ್ಲಾಗಲಿ ಆಗದಂತೆ ಪ್ರಾರ್ಥಿಸಿರಿ"

**ಇದರ ಅರ್ಥವೇನು?**

ಮೊದಲು ನಾವು ಈ ಸಂಕೇತಗಳ ಅರ್ಥಗಳನ್ನು ತಿಳಿದುಕೊಳ್ಳೋಣ

**"ಚಳಿಗಾಲ"**

ನಮ್ಮೆಲ್ಲರಿಗೂ ತಿಳಿದಿರುವ ಹಾಗೆ ಬೇಸಿಗೆ ಕಾಲದ **ನಂತರ** ಚಳಿಗಾಲ ಬರುತ್ತದೆ.



ಹಾಗಾದರೆ "**ಬೇಸಿಗೆಕಾಲ**"ವು ಸಂಕೇತವಾಗಿ ಏನನ್ನು ಸೂಚಿಸುತ್ತದೆ ?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ

**ಜ್ಞಾನೋಕ್ತಿಗಳು** 10:5 – "ಬೇಸಿಗೆಯಲ್ಲಿ ಕೂಡಿಸುವವನು ಬುದ್ಧಿವಂತನಾದ ಮಗನು ಸುಗ್ಗಿಯಲ್ಲಿ ನಿದ್ದೆ ಮಾಡುವವನು ನಾಚಿಕೆ ಪಡಿಸುವ ಮಗನು"

ಹೌದು! "**ಬೇಸಿಗೆ**" ಸಂಕೇತದ ಅರ್ಥ ಏನೆಂದರೆ

**....ಸುಗ್ಗಿಯ ಕಾಲ !**

ಆದ್ದರಿಂದ "**ಚಳಿಗಾಲ**"ವು ಸುಗ್ಗಿಯ ಕಾಲವು ಮುಗಿದ ನಂತರದ ಕಾಲವನ್ನು ಸೂಚಿಸುತ್ತದೆ !!

ಮತ್ತು ಕರ್ತನ ಎಚ್ಚರಿಕೆಯ ಮಾತು ಇಲ್ಲಿ ಏನೆಂದರೆ

**"ಪ್ರಾರ್ಥಿಸಿರಿ"**

ಏಕೆಂದರೆ ಬಾಬೆಲಿನಿಂದ ಪಲಾಯನ ಅಥವಾ ಓಡಿ ಹೋಗುವುದು ಸುಗ್ಗಿ ಮುಗಿದ **ನಂತರ** ಆಗಬಾರದು.

ಏಕೆಂದರೆ ಅದು ಬಹಳ ಭಯಾನಕ ಸ್ಥಿತಿಯೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಯೆರೆಮೀಯ** 8:20 – **" ಸುಗ್ಗಿ ಹೋಯಿತು, ಬೇಸಿಗೆಕಾಲ ತೀರಿತು; ಆದರೆ ನಾವು ರಕ್ಷಿಸಲ್ಪಡಲಿಲ್ಲ"**

ಅಯ್ಯೋ ! ಇಂತಹ ವರ್ಗದವರು ಹೇಗಿರುತ್ತಾರೆಂದರೆ ಅವರು ಹಿಂಜರಿಯುತ್ತಾರೆ ಮತ್ತು ಹಿಂಗರಿಯುತ್ತಾರೆ... ಮತ್ತು ಬಾಬೆಲಿನಿಂದ ಹೊರಬರಲು ಎಲ್ಲಿಯವರೆಗೂ ಹಿಂಜರಿಯುತ್ತಾರೆ ಎಂದರೆ

**....ಅದು ಬಹಳ ತಡವಾಗಿರುತ್ತದೆ!!**

ಅವರು ಕ್ರಿಸ್ತನ ಶರೀರದ ಅಂಗವಾಗುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ ಮತ್ತು **"ಬುದ್ದಿಯಿಲ್ಲದ ಕನ್ಯೆ"** ಯರಾಗಿ ಬಿಡುತ್ತಾರೆ.

ಈಗ ನಾವು ಎರಡನೆಯ ಸಂಕೇತವನ್ನು ಕುರಿತು ಓದೋಣ.

**" ಸಬ್ಬತ್ತಿನ ದಿನದಲ್ಲಾಗಲೀ"**

**"ಸಬ್ಬತ್ತಿನ ದಿನ" ಎಂದರೇನು ಅರ್ಥ?**

ಇದು ಯೆಹೂದ್ಯ ಸಬ್ಬತ್ ದಿನದ **ನಿಜರೂಪ**ವಾಗಿದೆ

ಯುಗಗಳ ದೇವರ ದೈವೀಕ ಯೋಜನೆಯಲ್ಲಿ ಏಳನೆಯ ಸಾವಿರದ ವರುಷವಾಗಿದೆ.

ಭೂಮಿಯಲ್ಲಿ ಕ್ರಿಸ್ತನ ಸಾವಿರ ವರ್ಷಗಳ ಆಳ್ವಿಕೆ ಎಂದು ಆತನು ಸೂಚಿಸಿರುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ

**ಮತ್ತಾಯ** 12:8 – **"ಯಾಕೆಂದರೆ ಮನುಷ್ಯ ಕುಮಾರನು ಸಬ್ಬತ್ ದಿನಕ್ಕೂ ಒಡೆಯನಾಗಿದ್ದಾನೆ ಎಂದು ಹೇಳಿದರು"**

ಹೌದು ! ಅದು ಸಹಸ್ರ (ಸಾವಿರ)ವರ್ಷಗಳು ಅಥವಾ ಅಕ್ಟೋಬರ್ 1874 ರಲ್ಲಿ ಆರಂಭಗೊಂಡ ಕಾಲವಾಗಿದೆ !

ಅದು ನ್ಯಾಯತೀರ್ಪಿನ ದಿನವೂ ಸಹ ಆಗಿದ್ದು, ಪ್ರತಿ ವರ್ಷವು ಕಳೆದಂತೆಲ್ಲಾ ಈ ದಿನದ ಹತ್ತಿರ ಮತ್ತು ಹತ್ತಿರವಾಗುತ್ತಾ ಕೊನೆಯ ನ್ಯಾಯತೀರ್ಪಿನ ಕಡೆಗೆ ಹೋಗುತ್ತಾ ಇದ್ದೇವೆ. ಮತ್ತು ಬಾಬೆಲಿನ ಮೇಲೆ ಬರುವ ಸಂಕಟಗಳಿಗೆ ಹತ್ತಿರವಾಗುತ್ತಿದೆ

ಮತ್ತು ಬಾಬೆಲನ್ನು ಬಿಟ್ಟು ಹೋಗುವುದು ಅಷ್ಟೊಂದು **ಬಹಳ ಕಷ್ಟಕರವಾಗಿರುತ್ತದೆ!**

ಮತ್ತು ಇನ್ನೂ ನಮಗೆ ಮನವರಿಕೆಯಾಗಬೇಕಾಗಿರುವುದು ಏನೆಂದರೆ 1874 ರಲ್ಲಿ ಈ **"ಸಬ್ಬತ್ ದಿನ"** ಆರಂಭವಾದ ನಂತರ ಅಲ್ಲಿ ಮೊದಲು ಸುಗ್ಗಿ ಅಥವಾ **"ಬೇಸಿಗೆ"** ಕಾಲವಿತ್ತು ಮತ್ತು ನಂತರ ಅಂದರೆ ಸುಗ್ಗಿ ಕಾಲವು ಮುಗಿದ ನಂತರ... **"ಚಳಿಗಾಲ"** ಬರುತ್ತದೆ.

ಕರ್ತನ ಎಚ್ಚರಿಕೆ ಏನೆಂದರೆ ಬಾಬೆಲಿನಿಂದ ಪಲಾಯನವಾಗವುದು... ಸಬ್ಬತ್ ದಿನದ ಆ **"ಚಳಿಗಾಲ"**ದಲ್ಲಿ ಇರಬಾರದೆಂದು **"ಪ್ರಾರ್ಥಿಸಬೇಕು"** ಎಂಬುದು !!

**ಹೌದು! ಈ ಕೊನೆಯ ಎಚ್ಚರಿಕೆಯಲ್ಲಿ ಕರ್ತನು.. ಯಾರು ಬಾಬೆಲನ್ನು ಬಿಟ್ಟು ಪಲಾಯನ ಮಾಡುವುದಕ್ಕೆ ಹಿಂಜರಿಯುತ್ತಾರೋ... ಮತ್ತು ನಿಧಾನ ಮಾಡುತ್ತಾರೋ... ಅಂಥವರನ್ನು ಉದ್ದೇಶಿಸಿ ಹೇಳುತ್ತಿದ್ದಾನೆ!!**

**ಆತನು ಸ್ಪಷ್ಟವಾಗಿ ಎಚ್ಚರಿಸಿ ಇದು ಬಹಳ ಅಹಿತಕರ (ಇಷ್ಟವಿಲ್ಲದ) ಪರಿಸ್ಥಿತಿಯಲ್ಲಿ ಇರಬಾರದೆಂದು ಪ್ರಾರ್ಥಿಸಬೇಕೆಂದು ಹೇಳುತ್ತಾನೆ!!**

ಆದ್ದರಿಂದ ನಾವು ಕರ್ತನ ಈ ಎಚ್ಚರಿಕೆಗಳ ಮೂಲಕ ನೋಡುವುದೇನೆಂದರೆ, ಸ್ವತಃ

ಕರ್ತನು – ...ಬಾಬೆಲನ್ನು ಬಿಟ್ಟು ಬರುವುದಕ್ಕೆ ಕರೆಯಲ್ಪಟ್ಟ **"ಆತನ ಜನರಿಗೆ"** ಬಂದು ಒದಗುವ ವಿವಿಧ ಪರಿಸ್ಥಿತಿಗಳನ್ನು ಮುಂಚೆಯೇ ನೋಡಿದ್ದಾನೆ!!

## ಹೌದು!! ಕರ್ತನಿಗೆ ನಮ್ಮೆಲ್ಲರ ಪರಿಸ್ಥಿತಿಗಳು ತಿಳಿದಿದೆ !!

ಈಗ ಕೊನೆಯದಾಗಿ ಈ "**ಬಿಟ್ಟು ಹೊರಡುವ**" ಛಾಯೆಯನ್ನು ವಿಮೋಚನಕಾಂಡ ಪುಸ್ತಕದಲ್ಲಿ ನೆರಳಾಗಿ ಕೊಟ್ಟಿರುವುದನ್ನು ಮತ್ತು ಅದು ನಮಗೆ ನೀಡುವ ಪಾಠಗಳನ್ನು ಕುರಿತು ನೋಡೋಣ.

ಹೌದು! ಈಗ ನಾವು ಕೆಳಗಿನ ವಾಕ್ಯವನ್ನು ಓದೋಣ.

### ವಿಮೋಚನಕಾಂಡ 8:25

"ಆಗ ಫರೋಹನು ಮೋಶೆ ಆರೋನರನ್ನು ಕರೆಯಿಸಿ ಅವರಿಗೆ ನೀವು ಹೋಗಿ ದೇಶದಲ್ಲಿಯೇ ನಿಮ್ಮ ದೇವರಿಗೆ ಯಜ್ಞವನ್ನರ್ಪಿಸಿರಿ ಅಂದನು"

ಹೌದು! ಇಲ್ಲಿ, ಹೇಗೆ ಮೋಶೆ ಮತ್ತು ಆರೋನರು ಫರೋಹ ಆಗುಪ್ತ್ಯದ ರಾಜನು ಬಳಿಗೆ ಹೋಗಿ ಅರಣ್ಯದಲ್ಲಿ ಹೊಗಿ ಯಜ್ಞವನ್ನು ಅರ್ಪಿಸಲು ಅನುಮತಿಯನ್ನು ಕೇಳಿಕೊಂಡು ಹೋದರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

### ವಿಮೋಚನಕಾಂಡ 8:27

"ಅರಣ್ಯದಲ್ಲಿ ಮೂರು ದಿನಗಳು ಪ್ರಯಾಣ ಮಾಡಿ ನಮ್ಮ ದೇವರಾದ ಕರ್ತನಿಗೆ ಆತನ ಅಪ್ಪಣೆಯಂತೆ ಯಜ್ಞ ಮಾಡುವೆವು ಎಂದು ಹೇಳಿದನು"

**ಆಹ್ ! ಇಲ್ಲಿ ವ್ಯಕ್ತವಾಗಿರುವ ಅದ್ಭುತವಾದ ಛಾಯೆಯ ಚಿತ್ರಣವನ್ನು ನೋಡಿದಿರಾ ಪ್ರೀತಿಯ ಸಹೋದರ, ಸಹೋದರಿಯರೇ??**

ಹೌದು! ಇದೊಂದು ಸುವಾರ್ತಾ ಯುಗದಲ್ಲಿ "**ಯಜ್ಞದ ಮೂಲಕ ಒಡಂಬಡಿಕೆ**" ಮಾಡಿ (**ಕೀರ್ತನೆಗಳು** 50 : 5) ದೇವರಿಗೆ ಅರ್ಪಿಸುವುದಕ್ಕಾಗಿ ಕರೆಯಲ್ಪಟ್ಟ ಕ್ರೈಸ್ತರ ಚಿತ್ರಣವಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ರೋಮಾಪುರದವರಿಗೆ** 12:1 – "ಆದ್ದರಿಂದ ಸಹೋದರರೇ, ನೀವು ನಿಮ್ಮ ದೇಹಗಳನ್ನು ಪರಿಶುದ್ಧವೂ ದೇವರಿಗೆ ಮೆಚ್ಚಿಕೆಯೂ ಆಗಿರುವ ಸಜೀವಯಜ್ಞವಾಗಿ ಸಮರ್ಪಿಸಬೇಕೆಮದು  ದೇವರ ಕರುಣೆಯಿಂದ ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ, ಇದೇ ನಿಮ್ಮ ಯೋಗ್ಯವಾದ ಸೇವೆಯಾಗಿದೆ"

ಹೌದು ! ಇದು ಒಬ್ಬ ಕ್ರೈಸ್ತನ ಬಲಿಯ ಜೀವನವಾಗಿದ್ದು, ಲೋಕದಿಂದ **ಬೇರ್ಪಟ್ಟು** "**ಅರಣ್ಯ**" ದಲ್ಲಿರುವುದಕ್ಕೆ ಸೂಚಿತವಾಗಿದೆ !!

ಈ ನಾವು ಬೇರೆ ಸಾಂಕೇತಿಕ ಛಾಯೆಗಳನ್ನು ಕುರಿತು ನೋಡೋಣ



**"ಫರೋಹನು"**

ಇಲ್ಲಿ ಫರೋಹನು ಇಗುಪ್ತ್ಯದ ರಾಜನಾಗಿದ್ದು, ಇಗುಪ್ತ್ಯವು ಇಸ್ರಾಯೇಲ್ ಜನರಿಗೆ ಗುಲಾಮಗಿರಿ ಮತ್ತು ದಾಸತ್ವವನ್ನು ಸೂಚಿಸುತ್ತದೆ ಮತ್ತು ಇಲ್ಲಿ ಫರೋಹನು


ದಾಸತ್ವದಲ್ಲಿರುವವರಿಗೆ ರಾಜನೆಂದು ಸೂಚಿಸುತ್ತದೆ !!

ಇನ್ನೂ, ಇಗುಪ್ತ್ಯವು ಬಾಬೆಲಿಗೆ ಚಿತ್ರಣವಾಗಿದೆ ಮತ್ತು ಹಾಗಾದರೆ ಫರೋಹನು ಸೈತಾನನಿಗೆ ಚಿತ್ರಣವಾಗಿದ್ದಾನೆ, ಮತ್ತು ಬಾಬೆಲಿನ ನಿಯಂತ್ರಗಾರನೂ ಮತ್ತು ಆಡಳಿತಗಾರನೂ ಆಗಿದ್ದಾನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಮತ್ತಾಯ** 13: 38 - **"ಆದರೆ ಹಣಜಿಯು ಕೆಡುಕನ ಮಕ್ಕಳಾಗಿದ್ದಾರೆ"**

ನಂತರ ನಾವು ನೋಡುವುದೇನೆಂದರೆ

**"ಮೋಶೆ ಮತ್ತು ಆರೋನರು"**



ಇವರು ಕ್ರೈಸ್ತರ ಮಧ್ಯದೊಳಗಿಂದ ಮುಂದೆ ಬಂದು ಯಜ್ಞವನ್ನು ಅರ್ಪಿಸುವವರಿಗೆ ಚಿತ್ರವಾಗಿದೆ.

ಹೌದು! **"ಆಯಲ್ಪಟ್ಟ"** ವರ್ಗದವರು

ಇವರು ಯೇಸುವಿನ ಬಲಿಯ ಹೆಜ್ಜೆಯ ಜಾಡನ್ನು **"ಹಿಂಬಾಲಿಸಲು"** ಆಯ್ಕೆ ಮಾಡಿಕೊಂಡವರಾಗಿದ್ದಾರೆ !

ಮೋಶೆ ಮತ್ತು ಆರೋನರು ಇನ್ನೂ **"ಆಯ್ಕೆ"** ಯಾದ ವರ್ಗದವರಲ್ಲಿ ಎರಡು ಉಪಭಾಗವನ್ನು ಸೂಚಿಸುತ್ತದೆ.



മ

ಮೋಶೆ, ಇಬ್ಬರು ಸಹೋದರರಲ್ಲಿ ಚಿಕ್ಕವನಾಗಿದ್ದು, ಚಿಕ್ಕ ಗುಂಪು

**....ಚಿಕ್ಕ ಹಿಂಡನ್ನು ಸೂಚಿಸುತ್ತದೆ (THE LITTLE FLOCK)**

ಆರೋನನು, ಇಬ್ಬರು ಸಹೋದರರಲ್ಲಿ ದೊಡ್ಡವನಾಗಿದ್ದು, ದೊಡ್ಡಗುಂಪು

**......ಮಹಾ ಸಮೂಹವನ್ನು ಸೂಚಿಸುತ್ತದೆ (THE GREAT MULTITUDE)**

ಇಬ್ಬರೂ ಸೇರಿ ಮಾಂಶದಲ್ಲಿರುವ "**ಕ್ರಿಸ್ತನ ಶರೀರ**"ವನ್ನು ಸೂಚಿಸುತ್ತದೆ!

ಈಗ, ಫರೋಹನೊಂದಿಗೆ ನಡೆಯುವ ಮೋಶೆ ಮತ್ತು ಆರೋನರ ಮಾತುಕತೆಗಳಲ್ಲಿ ಒಂದು ವಿಷಯವನ್ನು ಅಧ್ಯಯನ ಮಾಡುತ್ತೇವೆ.

**ಬಾಬಿಲನ್ನು ಬಿಟ್ಟು ಯಜ್ಞದೊಂದಿಗೆ ಪ್ರತಿಷ್ಠೆಯ ಜೀವಿತ ದಲ್ಲಿ ಪ್ರವೇಶಿಸಬೇಕೆಂದು**

ನಿರ್ಧಾರ ಮಾಡಿರುವ "**ಆಯ್ಕೆ**"ಯಾದ ವರ್ಗದ ಸದಸ್ಯರೊಂದಿಗೆ ಸೈತಾನನು ನಾಲ್ಕು ಸಂಧಾನದ ಮೂಲಕ ಶೋಧನೆಗಳನ್ನು ತರುತ್ತಾನೆ.

ಹೌದು ! ಈಗ ನಾವು ಅವುಗಳನ್ನು ಒಂದೊಂದಾಗಿ ಅಧ್ಯಯನ ಮಾಡೋಣ.

## ಸಂಧಾನ [ರಾಜಿ] (COMPROMISE) # 1


**ವಿಮೋಚನಕಾಂಡ 8 : 25**

"ಆಗ ಫರೋಹನು ಮೋಶೆ ಆರೋನರನ್ನು ಕರೆಯಿಸಿ ಅವರಿಗೆ ನೀವು ಹೋಗಿ ಈ ದೇಶದಲ್ಲಿಯೇ ನಿಮ್ಮ ದವಿವರಿಗೆ ಯಜ್ಞವನ್ನರ್ಪಿಸಿರಿ ಅಂದನು"


ಇಲ್ಲಿ (ಈ) ದೇಶದಲ್ಲಿಯೇ ಎಂದರೆ ಐಗುಪ್ತ ದೇಶದೊಳಗೆ ಅಥವಾ ಆತ್ಮೀಕ ಸಂಜ್ಞೆಯಲ್ಲಿ ಹೇಳಬೇಕೆಂದರೆ ಇದು

**........ಬಾಬೆಲ್ ಸಭೆಯು ವ್ಯವಸ್ಥೆಗಳ ಒಳಗೆ ಸೂಚಿಸುತ್ತದೆ!**

ಹೌದು! ಇಲ್ಲಿ ಸೈತಾನನ "**ಶೋಧನೆ**" ಮತ್ತು ಮಾರ್ಗದರ್ಶನ ಏನೆಂದರೆ ಕ್ರಿಸ್ತನಿಗಾಗಿ ಮತ್ತು "**ಸತ್ಯಕ್ಕಾಗಿ**" ಪ್ರತಿಷ್ಠೆಯ ಜೀವಿತವನ್ನು



ಬಾಬೆಲ್ ಸಭೆಗಳು **ಒಳಗೆ** ಇರಲಿ ಮತ್ತು ಬಾಬೆಲ್‌ನ್ನು ಬಿಟ್ಟು ಹೋಗುವ ಅವಶ್ಯವೇ ಇಲ್ಲ ಎಂದು ಸಲಹೆ ನೀಡುತ್ತಾನೆ!



ಆಹ್ ! ಸತ್ಯವನ್ನು ಕೇಳಿದ ನಂತರ ಅನೇಕರು ಈ "**ಶೋಧನೆಗೆ**" ಬಿದ್ದುಹೋಗುತ್ತಾರೆ.

.....ಆದರೆ ಇದಾದ ನಂತರ ಬೇಗನೆ, ಸತ್ಯವನ್ನು ತಿಳಿದುಕೊಂಡ **ನಂತರ** ಈ ಸಭೆಗಳಲ್ಲಿ ಭಯಂಕರ ಅಸ್ವಸ್ಥತೆ ಮತ್ತು ಮಾನಸಿಕ ಮತ್ತು ಆತ್ಮೀಕ ಚಿತ್ರಹಿಂಸೆ ಉಂಟಾಗುವುದನ್ನು ಮನವರಿಕೆಯಾಗುತ್ತದೆ!

ಈ ಸಮಯದಲ್ಲಿಯೇ ಸೈತಾನನು ಎರಡನೆಯ ಸಂಧಾನವನ್ನು ತರುತ್ತಾನೆಂದು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## ಸಂಧಾನ [ರಾಜಿ] (COMPROMISE) # 2

**ವಿಮೋಚನಕಾಂಡ 8 : 28**

"ಅದಕ್ಕೆ ಫರೋಹನು ಅವರಿಗೆ - ನಿಮ್ಮ ದೇವರಾದ ಕರ್ತನಿಗೆ ಅರಣ್ಯದಲ್ಲಿ ಯಜ್ಞವನ್ನರ್ಪಿಸುವಂತೆ ನಿಮ್ಮನ್ನು ಕಳುಹಿಸುತ್ತೇನೆ; ಆದರೆ ದೂರ

**ಹೋಗಬೇಡಿರಿ; ನನಗೋಸ್ಕರ ಪ್ರಾರ್ಥನೆ ಮಾಡಿರಿ ಅಂದನು".**

ಬಾಬೆಲನ್ನು ಬಿಟ್ಟು ಹೋಗುವುದಕ್ಕೆ ನಿರ್ಧಾರ ಮಾಡಿದ ಮೇಲೆ
– ಸೈತಾನನು ಮುಂದಿನ ಸಂಧಾನವನ್ನು ತರುತ್ತಾನೆ.

**".....ಆದರೆ ದೂರ ಹೋಗಬೇಡಿರಿ..."**

ಹೌದು ! ಆಯಾ ಬಾಬೆಲಿನ ಸಭೆಗಳನ್ನು ಬಿಟ್ಟು ಹೋಗುವುದಕ್ಕೆ ನಿರ್ಧಾರ ಮಾಡಿದ ಮೇಲೆ ನಮಗೆ ಸೈತಾನನು ಕೊಡುವ ಆಲೋಚನೆ ಏನೆಂದರೆ:

**... ಐಕ್ಯವನ್ನು ಸಂಪೂರ್ಣವಾಗಿ ಕಡಿತಗೊಳಿಸಬೇಡಿರಿ !!**

ಐಕ್ಯತೆಗಾಗಿ ಬರುವ ಆಹ್ವಾನ ಈ ರೀತಿಯಿರಬಹುದು

**....ತಿಂಗಳಿಗೊಮ್ಮೆ ಇರಬಹುದು**

**....ಅಥವಾ ಎರಡು ತಿಂಗಳಿಗೊಮ್ಮೆ ಇರಬಹುದು !!**




ಈ ಆಲೋಚನೆಗಳನ್ನು
ಪಾಸ್ಟರ್‌ಗಳು
ಅಥವಾ ಸಭೆಯ
ಸದಸ್ಯರುಗಳ ಮೂಲಕ
ಬರಬಹುದು

.....ಮತ್ತು ಅನೇಕ ಸಾರಿ ಭಾವನಾತ್ಮಕವಾಗಿ ಬೆದರಿಸುತ್ತಾರೆ, ಹೇಗೆಂದರೆ

**"ಎಲ್ಲಾ ನಂತರ ಮೊದಲು ನಿನಗೆ ಯೇಸು ಮತ್ತು ಸತ್ಯವೇದದ ಬಗ್ಗೆ ಬೋಧಿಸಿದವರು ಯಾರು ?"**

**ಅಥವಾ ... "ಮೊದಲು" ನಿನಗೆ ಕ್ರೈಸ್ತ ಜೀವನಕ್ಕೆ ಉತ್ತೇಜನ ನೀಡಿದವರು ಯಾರು?**

**ಅಥವಾ "ಇಷ್ಟು ವರ್ಷಗಳು ನಿನ್ನನ್ನು ಕ್ರೈಸ್ತನನ್ನಾಗಿ ಬೆಳಸಿದವರನ್ನೇ ಬಿಟ್ಟುಹೋಗುತ್ತೀಯಾ ಅಥವಾ ನಿರಾಕರಿಸುತ್ತೀಯಾ?"**

**ಹೌದು! ಈ ಮಾತುಗಳು ಬಾಬೆಲನ್ನು ಥಟ್ಟನೆ ಮತ್ತು ಪೂರ್ಣವಾಗಿ ಸಂಪರ್ಕವನ್ನು ಕಡಿತಗೊಳಿಸಲು ಹಿಂಜರಿಯುತ್ತಾರೆ !!**

ಆದರೆ ಈ ಏರ್ಪಾಡು ಕೂಡ ಬೇಗನೆ ಅನಾನುಕೂಲವುಂಟು ಮಾಡುತ್ತದೆ ಏಕೆಂದರೆ

.....ಆ ಸಭೆಗಳಲ್ಲಿ ಸತ್ಯದಲ್ಲಿನ "ಐಕ್ಯ"ಕ್ಕೂ

....ಅಸತ್ಯದಲ್ಲಿನ "ಐಕ್ಯ"ಕ್ಕೂ ತದ್ ವಿರುದ್ಧವಾಗಿರುತ್ತದೆ.

ಆಗ ಸ್ಪಷ್ಟವಾದ ನಿರ್ಧಾರ ಉಂಟಾಗುತ್ತದೆ ಏನೆಂದರೆ:

**....ಬಾಬೆಲಿನ ಎಲ್ಲಾ ಸಂಬಂಧಗಳನ್ನು ಸಂಪೂರ್ಣವಾಗಿ ಕಡಿತಗೊಳಿಸುವುದು!**

ಆಗ ಸೈತಾನನು ಮೂರನೆಯ ಸಂಧಾನವನ್ನು ತರುತ್ತಾನೆ

## ಸಂಧಾನ (ರಾಜಿ) (COMPROMISE) # 3

**ವಿಮೋಚನಕಾಂಡ 10:11**

**"ಹಾಗೆ ಮಾಡದೆ ಈಗ ಗಂಡಸರಾದ ನೀವು ಹೋಗಿ ಕರ್ತನಿಗೆ ಸೇವೆಮಾಡಿರಿ; ಇದನ್ನೇ ನೀವು ಬಯಸಿದಿರಿ ಅಂದನು. ತರುವಾಯ ಅವರು ಫರೋಹನ ಎದುರಿನಿಂದ ಹೊರದೂಡಲ್ಪಟ್ಟರು."**

ಬಾಬೆಲಿನೊಂದಿಗೆ ಇದ್ದ ಎಲ್ಲಾ ಆಸಕ್ತಿಗಳನ್ನು ಸಂಪೂರ್ಣವಾಗಿ ಕಡಿತಗೊಳಿಸಲು ದೃಢವಾದ ತೀರ್ಮಾನ ಮಾಡಿದ ನಂತರ ಈ ಶೋಧನೆ ಮತ್ತು ಸಂಧಾನವನ್ನು ಸೈತಾನನು ಮುಂದಿಡುತ್ತಾನೆ.

**"ಗಂಡಸರಾದ ನೀವು" ಎಂದರೇನು ಅರ್ಥ?**

ಆತ್ಮೀಕ ಸಂಜ್ಞೆಯಲ್ಲಿ ಇದು ಜ್ಞಾನ ಮತ್ತು ಅಭಿವೃದ್ಧಿಯಲ್ಲಿ ಪೂರ್ತಿಯಾಗಿ ಬೆಳದಿರುವುದನ್ನು ಸೂಚಿಸುತ್ತದೆಂದು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ.

ಎಫೆಸದವರಿಗೆ 4:13 – (ತಮಿಳಿನಲ್ಲಿ ವಾಕ್ಯ 11) " ಹೀಗೆ ನಾವೆಲ್ಲರೂ ನಂಬಿಕೆಯ ಅನ್ಯೋನ್ಯತೆಯಲ್ಲಿಯೂ ದೇವಕುಮಾರನ ಜ್ಞಾನದಲ್ಲಿಯೂ ಪರಿಪೂರ್ಣ ಮನುಷ್ಯನಾಗುವುದಕ್ಕೆ ಕ್ರಿಸ್ತನ ಪರಿಪೂರ್ಣತೆಯ (ಅಳತೆಯ) ನೀಳದ ಪ್ರಮಾಣಕ್ಕೆ ಮಟ್ಟುವೆವು".


ಹೌದು! ಇಲ್ಲಿ ಬಾಬೆಲಿನಿಂದ ಹೊರಗೆ ಬಂದ ನಂತರ ಕುಟುಂಬದಲ್ಲಿ ವಿಭಾಗವನ್ನುಂಟು ಮಾಡುವುದೇ ಸೈತಾನನ ತಂತ್ರವೆಂದು ನಾವು ನೋಡುತ್ತೇವೆ.

"ಮನುಷ್ಯನಾಗಿ" ಇಲ್ಲದಿರುವ ಆ ಸದಸ್ಯರು ಆತ್ಮೀಕ ಒಳಿತನ್ನು ನಿರ್ಲಕ್ಷ್ಯ ಮಾಡುವುದಕ್ಕೆ ಪ್ರೋತ್ಸಾಹಿಸುತ್ತಾನೆ !!

ಈ ನಿರ್ಲಕ್ಷ್ಯತೆಗಳಲ್ಲಿ ಅನೇಕ **ರೂಪ**ಗಳಿರುತ್ತದೆ, ಅವುಗಳು ಯಾವುದೆಂದರೆ –

.... ಬಾಬೆಲಿನ ಸಭೆಗಳಲ್ಲಿ ಭಾನುವಾರ ಶಾಲೆಯಲ್ಲಿ (**Sunday school**) ಮಕ್ಕಳ ಓದು ಮುಂದುವರಿಸಲು ಅನುಮತಿಸುವದು.

...ಬಾಬೆಲಿನ ಶಾಲೆ ಮತ್ತು ಕಾಲೇಜುಗಳಲ್ಲಿ ಶಿಕ್ಷಣ ಹೊಂದಲು ಅನುಮತಿಸುವದು....





"ನೈತಿಕ ವಿಜ್ಞಾನ" ಪಾಠವನ್ನು ಕಲಿಸಲು ಕಳುಹಿಸುವ ಬದಲು "ಕ್ಯಾಟೆಕಿಸಮ್"(ಪ್ರಶ್ನೆ ಉತ್ತರ ಶಿಕ್ಷಣ) ದಲ್ಲಿ ಭಾಗವಹಿಸಲು ಅನುಮತಿಸುವದು.

ಒಂದೇ ಮನೆಯಲ್ಲಿ ವಾಸಿಸುವ ಗಂಡ ಅಥವಾ ಹೆಂಡತಿ ಅಥವಾ ಸಂಬಂಧಿಕರು ಸತ್ಯಕ್ಕೆ ಸಾಕ್ಷಿ ಕೊಡಲು ಪ್ರಯತ್ನ ಮಾಡದೆ ಇರುವುದು

ಕುಟುಂಬದ ಸದಸ್ಯರ ಆತ್ಮೀಕ ಒಳಿತಿಗೆ ಗಮನ ಕೊಡುವುದನ್ನು ಅಸಡ್ಡೆ ಮಾಡುವುದರಿಂದ ಅಭಿಪ್ರಾಯಗಳಲ್ಲಿ ವ್ಯತ್ಯಾಸವುಂಟಾಗಿ ಕುಟುಂಬದಲ್ಲಿಯೇ ವಿರೋಧತ್ವಗಳು ಉಂಟಾಗುತ್ತದೆ, ಇದಲ್ಲದೆ ಬಾಬೆಲ್ ಸಭೆಯ **ಪ್ರಭಾವವು ಕುಟುಂಬಗಳಲ್ಲಿ ಬೀರಲು ಮುಂದುವರಿಯುತ್ತವೆ.**

ಯಾರ್‍ಯರು ಕುಟುಂಬದ **ಎಲ್ಲಾ** ಸದಸ್ಯರನ್ನು ಬಾಬೆಲಿನಿಂದ ಹೊರಗೆ ತರಲು ತೀರ್ಮಾನಿಸುತ್ತಾರೆ ಆಗ ಸೈತಾನನು ನಾಲ್ಕನೆಯ ಸಂಧಾನವನ್ನು ಮುಂದಿಡುತ್ತಾನೆ.

## ಸಂಧಾನ [ರಾಜಿ] (COMPROMISE) # 4

**ವಿಮೋಚನ ಕಾಂಡ 10: 24**

**"ಆಗ ಫರೋಹನು ಮೋಶೆಯನ್ನು ಕರೆಯಿಸಿ ಅವನಿಗೆ ನೀವು ಹೋಗಿ ಕರ್ತನಿಗೆ ಸೇವೆ ಮಾಡಿರಿ, ನಿಮ್ಮ ಕುರಿದನಗಳು ಮಾತ್ರ ಇಲ್ಲಿರಲಿ ನಿಮ್ಮ ಮಕ್ಕಳೂ ನಿಮ್ಮ ಸಂಗಡ ಹೋಗಲಿ ಅಂದನು"**

ತನ್ನ ಕುಟುಂಬ ಮತ್ತು ಮಕ್ಕಳು ಎಲ್ಲರೂ ಸೇರಿ ಬಾಬೆಲ್ ಸಭೆಗಳನ್ನು ಬಿಟ್ಟು ಹೊರ ಬರುವುದಕ್ಕೆ ದೃಢವಾದ ನಿರ್ಧಾರ ಮಾಡಿದ ಮೇಲೆ ಇದೇ ಸೈತಾನನು ಸಂಧಾನ ಮಾಡುವುದಕ್ಕೆ ಇರುವ **ಕೊನೆಯ ಪ್ರಯತ್ನವಾಗಿದೆ.**

**ಈಗ ಈ ಕೆಳಗಿನ ವಾಕ್ಯದ ಅರ್ಥವೇನು?**

**"ನಿಮ್ಮ ಕುರಿದನಗಳು ಮಾತ್ರ ಇಲ್ಲಿರಲಿ"**

ಇಲ್ಲಿ **"ಕುರಿ ಮತ್ತು ದನಗಳು"** ಎಂದರೆ

.....ಜೀವನೋಪಾಯ ಮತ್ತು ವ್ಯಾಪಾರವನ್ನು ಸೂಚಿಸುತ್ತದೆ .

ಹೌದು! ಯಾರ್‍ಯಾರು ಬಾಬೆಲಿನ ಶಿಕ್ಷಣ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ

ಕೆಲಸ ಮಾಡುತ್ತಾರೋ, ಆ ವಿಷಯವನ್ನು ಸೂಚಿಸುತ್ತದೆ.

....ಇದಲ್ಲದೆ ಈ ಬಾಬೆಲ್ ಸಂಸ್ಥೆಗಳಲ್ಲಿ ಸಂಪರ್ಕವಿಟ್ಟುಕೊಂಡಿರುವ ಜನರಿಗೆ, ತಾವು ಸತ್ಯಕ್ಕಾಗಿ ತೆಗೆದುಕೊಂಡಿರುವ ನಿರ್ಧಾರದ ನಿಮಿತ್ತ ಈ ಸಾಧನ (ಕಾರ್ಯ)ಗಳ ಮೂಲಕ ಒತ್ತಡವನ್ನು ಹೇರುತ್ತಾರೆ!

ಈ ಹಣಕಾಸಿನ ವಿಷಯದಲ್ಲಿ ಆವಲಂಬಿಸಿರುವುದರಿಂದ ಸತ್ಯಕ್ಕಾಗಿ ಸಂಧಾನ ಮಾಡಿಕೊಳ್ಳಬೇಕಾಗಬಹುದು.

ಶಿಕ್ಷಕರು ಮತ್ತು ಇತರರು ಈ ಬಾಬೆಲ್ ಶಾಲಾ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದರೆ, ಅವರು ಬಾಬೆಲನ್ನು ಬಿಟ್ಟರೆ ತಮ್ಮ ಕೆಲಸವನ್ನು ಕಳೆದುಕೊಳ್ಳುವ ಎಚ್ಚರಿಕೆಯನ್ನು ನೀಡಲಾಗುವುದು ಮತ್ತು ಇವರೊಂದಿಗೆ ಇರುವ ಎಲ್ಲಾ ಸಂಪರ್ಕಗಳನ್ನು ಕಡಿತಗೊಳಿಸಲಾಗುವುದು ಎಂಬ ಎಚ್ಚರಿಕೆಯನ್ನು ನೀಡಲಾಗುವುದು.

ಇದೇ ರೀತಿ ವೈದ್ಯರು, ನರ್ಸ್‌ಗಳು ಮತ್ತು ಇತರರು ಈ ಬಾಬೆಲ್ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಎಚ್ಚರಿಕೆ ಉಂಟಾಗಬಹುದು.





**ಹೌದು! ಬಾಬೆಲನ್ನು ಬಿಟ್ಟು ಹೊರಬರಲು ಮಾಡುವ ತೀರ್ಮಾನಕ್ಕೆ ಕರ್ತನ ಮೇಲೆ ಬಲವಾದ ನಂಬಿಕೆ ಮತ್ತು ವಿಶ್ವಾಸವಿರಬೇಕು.**

**ಹೌದು! ಬಾಬೆಲನ್ನು ಬಿಟ್ಟು ಬರುವುದಕ್ಕೆ ಕರ್ತನಲ್ಲಿ ಬಲವಾದ ನಂಬಿಕೆ ಮತ್ತು ...ವಿಶ್ವಾಸ ಇರಬೇಕು.**

ಮತ್ತು ಯಾರೆಲ್ಲಾ ಆತನನ್ನು ವಿಶ್ವಾಸಿಸುತ್ತಾರೋ, ಅವರೆಲ್ಲರಿಗೆ ಆತನ ವಾಗ್ದಾನ ನೆನಪಿಗೆ ಬರುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಬರೆದಿದೆ.

**ಇಬ್ರಿಯರಿಗೆ** 13:5 - "ನಿಮ್ಮ ನಡತೆಯು ದ್ರವ್ಯಾಶೆಯಿಲ್ಲದ್ದಾಗಿರಲಿ; ನಿಮಗಿರುವುಗಳಲ್ಲಿ ತೃಪ್ತರಾಗಿರ್ರಿ; ಯಾಕೆಂದರೆ - ನಾನು ನಿನ್ನನ್ನು ಎಂದಿಗೂ ಕೈಬಿಡುವುದಿಲ್ಲ ಇಲ್ಲವೆ ತೊರೆಯುವುದಿಲ್ಲವೆಂದು ಆತನು ಹೇಳಿದ್ದಾನೆ"

**➡ ಹೌದು! ಇದು ... ಸ್ವತ: ಸರ್ವಶಕ್ತನಾದ ದೇವರಿಂದ ಬರುವ ಭರವಸೆಯಾಗಿದೆ!!**

ಆದ್ದರಿಂದ ಪ್ರಿಯ ಸಹೋದರ ಸಹೋದರಿಯರೆ, ಸ್ವತ: ಪರಲೋಕದಲ್ಲಿರುವ ದೇವರಿಂದ ನಮಗಿರುವ ಇಂದಿನ ಕರೆ ಏನೆಂಬುದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಪ್ರಕಟಣೆ** 18:4 – "...ನನ್ನ ಜನರೇ, ಅವಳಿಂದ ಹೊರಗೆ ಬನ್ನಿರಿ: ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಬಾರದು."

**ಹೌದು! ಬಾಬೆಲಿನಿಂದ ಹೊರಬರುವುದು ಮೊತ್ತ ಮತ್ತು ಪೂರ್ತಿಯಾಗಿರಬೇಕು !!**

ಮತ್ತು ಕೊನೆಯದಾಗಿ ನಮ್ಮ ಯಜಮಾನನ ವಾಕ್ಯಗಳನ್ನು ನಾವು ಹೀಗೆ ಕೆಳಗಿನ ವಾಕ್ಯದಲ್ಲಿ ಕೇಳುತ್ತೇವೆ.

**ಯೋಹಾನ** 10:4 – "ಕುರಿಗಳು ಅವನ ಸ್ವರವನ್ನು ತಿಳಿದುಕೊಳ್ಳುವುದರಿಂದ ಅವನನ್ನು ಹಿಂಬಾಲಿಸುತ್ತವೆ."

**➡ ನೀವು ಆ ಕರ್ತನ "ಕುರಿಗಳಲ್ಲಿ" ಒಂದು ಕುರಿಯಾಗಿದ್ದೀರಾ?**


**➡ ಇಂದು ನೀವು ಆತನ ಸ್ವರವನ್ನು "ಕೇಳುತ್ತೀರಾ"?**

**➡ ಈ ಪರಲೋಕದಿಂದ ಬಂದಿರುವ "ಕರೆ"ಯು ನಿಮಗಾಗಿಯೇ?**

ಕರ್ತನು **ನಿಮಗೆಲ್ಲರಿಗೂ** ಪರಲೋಕದಿಂದ ಆತನ ಸ್ವರವು ನಿಮಗೆ **ಕೇಳಿಸಿ** ....ಮತ್ತು **ವಿಧೇಯ**ರಾಗುವಂತೆ ಸಹಾಯ ಮಾಡಲಿ !!

**.....ಆಮೆನ್....**

For Private Circulation Only




NOT FOR SALE

For more Subjects contact: MESSENGERS OF CHRIST  E-mail: thekingdom1_6@yahoo.com